# 4

# ದೇವರ ಪಾತ್ರಗಳನ್ನು ಪ್ರತಿಬಿಂಬಿಸುವ ಹೆಸರುಗಳು

ತನ್ನ ಜನರ ಜೀವನದಲ್ಲಿ ಕರ್ತನ ಪಾತ್ರವು ಹಳೇ ಒಡಂಬಡಿಕೆಯಲ್ಲಿ ಆತನಿಗಾಗಿ ಹಲವಾರು ಅಂಕಿತಗಳನ್ನು ಒದಗಿಸಿಕೊಟ್ಟಿತು. ಈ ಪಾಠದಲ್ಲಿ ಆ ಹೆಸರುಗಳಲ್ಲಿ ಕೆಲವುಗಳನ್ನು ಪರೀಕ್ಷಿಸೋಣ ಮತ್ತು ಹೀಗೆ ದೇವರನ್ನು ನಾವು ಹೇಗೆ ದೃಷ್ಟಿಸಬೇಕೆಂಬುದರ ಬಗ್ಗೆ ಹೆಚ್ಚು ಕಲಿತುಕೊಳ್ಳೋಣ.

## "ನ್ಯಾಯಾಧಿಪತಿ"

ಆದಿಕಾಂಡ 18:25ರಲ್ಲಿ ಅಬ್ರಹಾಮನು ತನ್ನ ವಿಷಯವನ್ನು ಬೇಡಿಕೊಂಡಾಗ ದೇವರನ್ನು *Shophet* "ನ್ಯಾಯಾಧಿಪತಿ" ಎಂದು ಸಂಬೋಧಿಸಿ ಹೇಳಿದನು. ಅಬ್ರಹಾಮನು ಸೋದೋಮ್ ಗೊಮೋರಗಳಲ್ಲಿಯ ಯಾವುದೇ ನೀತಿವಂತ ಜನರು ದುಷ್ಟ ಜನರೊಂದಿಗೆ ಕಷ್ಟಪಡಬೇಕೆಂದು ಯೋಚಿಸಲಿಲ್ಲ. ಆದುದರಿಂದ, ಎಲ್ಲಾ ಭೂಲೋಕದ *Shophet* (ನ್ಯಾಯಾಧಿಪತಿ) ಸರಿಯಾದ ಸಂಗತಿಯನ್ನು ಮಾಡುವನೆಂಬ ವಿಷಯದ ತಳಹದಿಯ ಮೇಲೆ ಕನಿಕರವುಳ್ಳವನಾಗಿರಬೇಕೆಂದು ಅವನು ಬೇಡಿಕೊಂಡನು.

ಈ ಪ್ರತ್ಯೇಕವಾದ ಸಂದರ್ಭದಲ್ಲಿ ಮಾನವ ಜೀವಿಗೆ ಸರಿಯಾದದ್ದೆಂದು ತೋರಿದ್ದು ದೇವರ ದೃಷ್ಟಿಯಲ್ಲಿಯೂ ಸರಿಯಾದದ್ದಾಗಿತ್ತು. ಹಾಗಿದ್ದರೂ ಕೆಲವು ಸಲ ಮಾನವರಿಗೆ ಅನ್ಯಾಯವಾದವುಗಳೆಂದು ತೋರುವ ಸಂಗತಿಗಳು ಸಂಭವಿಸಲಿಕ್ಕೆ ಬಿಟ್ಟದ್ದಕ್ಕಾಗಿ ದೇವರನ್ನು ಖಂಡಿಸಿದ್ದಾರೆ. ಅನ್ಯಾಯಗಾರನಾಗಿರಲು ದೇವರಿಗೆ ಅಸಾಧ್ಯವಾದದ್ದಾಗಿದೆ. ಯಾಕಂದರೆ ಆತನ ಸ್ವಭಾವವೇ ನೀತಿವಂತಿಕೆಯಾಗಿದೆ. "ಕೇಡನ್ನು ನೋಡಲಾರದ ಅತಿಪವಿತ್ರ ದೃಷ್ಟಿಯುಳ್ಳವನು" ಮತ್ತು "ದುಷ್ಟತ್ವದ ಮೇಲೆ" ಕಟಾಕ್ಷಿಸಲಾರದವನೂ ಆತನಾಗಿದ್ದಾನೆ (ಹಬಕ್ಕೂಕ 1:13)ಣ "ನಂಬಿಕಸ್ತಿಕೆಯ ದೇವರು ಹಾಗೂ ಅನ್ಯಾಯವಿಲ್ಲದವನು, ನೀತಿವಂತನೂ ಯಥಾರ್ಥನೂ ಆಗಿದ್ದಾನೆ" (ಧರ್ಮೋಪದೇಶಕಾಂಡ 32:4)ಣ "ನೀತಿ ನ್ಯಾಯಗಳು ಆತನ ಸಿಂಹಾಸನದ ಅಸ್ತಿವಾರವು" (ಕೀರ್ತನೆ 89:14).

ದೇವರ ನಿಯಮಗಳ ಅನೇಕ ಪ್ರಕಟನೆಯ ಸರಿಯಾಗಿರುವಿಕೆಯು (ನೋಡಿರಿ ಯಾಜಕಕಾಂಡ 19:18ಣ ಧರ್ಮೋಪದೇಶಕಾಂಡ 4:8ಣ 23:24, 25ಣ 24:10-22). ಆತನ ತೀರ್ಮಾನಗಳಿಗೆ ಒಳ್ಳೆಯ ಕಾರಣವಿದೆಯೆಂಬ ನಂಬಿಕೆಯನ್ನು ಕೊಡತಕ್ಕದ್ದು. ಅನ್ಯಜನಾಂಗದವರ ನಾಶನದಲ್ಲಿ (1 ಸಮುವೇಲ 15)ಣ ಸೌಲನ ಏಳು ಮಂದಿ ಗಂಡುಮಕ್ಕಳನ್ನು ಕೊಂದದ್ದಕ್ಕೆ ಪ್ರತಿಯಾಗಿ ಮಾಡಿದ್ದರಲ್ಲಿ (2 ಸಮುವೇಲ 21:3, 5, 6)ಣ ಅಕ್ರಮ ಸಂಪರ್ಕದಿಂದ ಹುಟ್ಟಿದ ಮೋವಾಬ್ಯರನ್ನು ಅಮ್ಮೋನಿಯರನ್ನು ತಿರಸ್ಕರಿಸಿದ್ದರಲ್ಲಿ (ಧರ್ಮೋಪದೇಶಕಾಂಡ 23:2-6)ಣ ರೋಗಗಳೂ ಸುಂಟರ ಗಾಳಿಗಳೂ ಬರುವಂತೆ

ಬಿಡುವದರಲ್ಲಿ ಆತನು ನೀತಿವಂತನಾಗಿದ್ದಾನೆಂದು ನಾವು ನಂಬಬಹುದು. ದೇವರ ಮನಸ್ಸಿನಲ್ಲಿ ಇರುವಂಥ ಎಲ್ಲವನ್ನೂ ಅರ್ಥಮಾಡಿಕೊಳ್ಳುವದಕ್ಕೆ ಮಾನವನ ವಿವೇಚನೆಯು ಸಾಲುವದಿಲ್ಲಣಿ ಕೆಲವು ಸಲ *Shophet,* ಇಡೀ ಭೂಲೋಕದ ನ್ಯಾಯಾಧಿಪತಿಯು ಸರಿಯಾದದ್ದನ್ನು ಮಾಡುವನು ಎಂಬುದಾಗಿ ಅಬ್ರಹಾಮನ ವಿಶ್ವಾಸವನ್ನು ಹೊಂದಿಕೊಳ್ಳುವುದು ವ್ಯವಹಾರಿಕ ಪರಿಹಾರವಾಗಿರುತ್ತದೆ.

ದೇವರು ಪ್ರತಿಯೊಂದು ಅನ್ಯಾಯವನ್ನು ಸರಿಪಡಿಸುವನು ಎಂಬುದನ್ನು ಆತನ ಸ್ವಭಾವವು ಭರವಸೆಯನ್ನು ಕೊಡುತ್ತದೆ. ಬಹಳ ಸಲ, ತನ್ನ ಆಳವಾದ ಜ್ಞಾನದಲ್ಲಿ, ಹೇಬೆಲನು ಮತ್ತು ನಾಬೋತನು ಸಾಕ್ಷಿಕೊಡುವಂತೆ, ಆತನು ಈ ಜೀವಿತದಲ್ಲಿ ಸರಿಪಡಿಸುವದಿಲ್ಲ (ನೋಡಿರಿ ಆದಿಕಾಂಡ 4:8ಣಿ 1 ಅರಸು 21:1-16). ಐಶ್ವರ್ಯವಂತ ಮತ್ತು ಲಾಜರ ಸ್ಥಾಪಿಸಿರುವಂತೆ, ಕೆಲವು ಸಲ ಸರಿಪಡಿಸುವಿಕೆಯು ಮುಂದಿನ ಲೋಕಕ್ಕಾಗಿ ಕಾಯುತ್ತದೆ. ಹೀಗಿದ್ದರೂ ಒಂದು ದಿನ ದೇವರು ಎಲ್ಲಾ ಸಂಗತಿಯನ್ನು ಸರಿಪಡಿಸುವನು. ಈ ಕಾರಣದಿಂದ, ಪ್ರಸಂಗಿ 5:8ನ್ನು ಜ್ಞಾಪಿಸಿಕೊಳ್ಳಿರಿ: "ಸಂಸ್ಥಾನದಲ್ಲಿ ಬಡವರ ಹಿಂಸೆಯನ್ನೂ ನೀತಿನ್ಯಾಯಗಳ ನಾಶನವನ್ನೂ ನೀನು ನೋಡಿದರೆ ಆಶ್ಚರ್ಯಪಡಬೇಡಣಿ ಏಕೆಂದರೆ ಒಬ್ಬ ಅಧಿಕಾರಿಯ ಮೇಲೆ ಇನ್ನೊಬ್ಬನಿದ್ದಾನೆ. ಅವರಿಬ್ಬರ ಮೇಲೆ ಮತ್ತೊಬ್ಬ ಹೆಚ್ಚಿನ ಅಧಿಕಾರವುಳ್ಳವನಿದ್ದಾನೆ."

## "ಕುರುಬನು"

ದೈವತ್ವದ ಪ್ರತ್ಯೇಕವಾದ ಭರವಸೆ ಕೊಡುವ ವಿವರಣೆಯು ಆದಿಕಾಂಡ 49:24ರಲ್ಲಿದೆ: *Ro'eh,* "ಕುರುಬ." ದೇವರು, ಕುರುಬನು, ಜೋಪಾಸನೆ ಮಾಡುವನೆಂಬ ಭರವಸೆ ಕೊಟ್ಟಾಗ ಯೋಸೇಫನ ಮನಸ್ಸಿನಲ್ಲಿ ಆಹ್ಲಾದಕರ ವಿಚಾರವನ್ನು ಯಾಕೋಬನು ಪ್ರೇರೇಪಿಸಿದನು. ದಾವೀದನೂ ಸಹ, "ಯೋಸೇಫನನ್ನು ಮಂದೆಯಂತೆ" (ಕೀರ್ತನೆ 80:1) ನಡಿಸಿದ ಕರ್ತನನ್ನು, *Ro'eh Yisra'el,* ಇಸ್ರಾಯೇಲಿನ ಕುರುಬನಂತೆ ನೋಡಿದನು. ದೇವರ ಎಲ್ಲಾ ಜನಾಂಗವನ್ನು "ಆತನು ಮೇಯಿಸುವ ಮಂದೆಯಂತೆ" ನೋಡಿದನು (ಕೀರ್ತನೆ 100:3), ಮತ್ತು ತನ್ನಲ್ಲಿ ವೈಯಕ್ತಿಕ ಆಸಕ್ತಿಯಿದ್ದ ತನ್ನ, *Ro'eh*ವನ್ನು ಕುರುಬನಿಗೆ ತನ್ನನ್ನು ಕುರಿಗೆ ಹೋಲಿಸಿ ಕೊಂಡನು (ಕೀರ್ತನೆ 23).

ಯೆಹೆಜ್ಕೇಲನ ದಿನಗಳಲ್ಲಿ, ಪ್ರವಾದಿಗಳೂ ಯಾಜಕರೂ ಅರಸರುಗಳೂ - ಕರ್ತನನ್ನು ಪ್ರತಿನಿಧೀಕರಿಸುವ ಇಸ್ರಾಯೇಲಿನ ಕುರುಬರಾಗಬೇಕಾಗಿದ್ದವರು - ಅವಲಂಭನೆಗೆ ಯೋಗ್ಯರಾಗಿರಲಿಲ್ಲವೆಂದು ಸಿದ್ಧಪಡಿಸಿ ತೋರಿಸಿದರು. "ತಮ್ಮನ್ನು ತಾವೇ ಮೇಯಿಸಿಕೊಳ್ಳುವ ಇಸ್ರಾಯೇಲಿನ ಕುರುಬರಿಗೆ ಅಯ್ಯೋ, ಕುರುಬರು ಮಂದೆಗಳನ್ನು ಮೇಯಿಸಬಾರದೋ?" (ಯೆಹೆಜ್ಕೇಲ 34:2). ಕುರುಬನಿಲ್ಲದ ಕುರಿಮಂದೆಯು "ಚದರಿಸಲ್ಪಟ್ಟಿತು" ಹಾಗೂ "ಯಾರೂ ಅವುಗಳ ಹಿಂದೆ ಹೋಗಿ ಹುಡುಕಲಿಲ್ಲ" (ಯೆಹೆಜ್ಕೇಲು 34:6). ಆಗ ಮಹಾ *Ro'eh* ಪರಲೋಕದ ಕುರುಬನು, "ಆಹಾ, ನಾನೇ ನನ್ನ ಕುರಿಗಳನ್ನು ಹಿಂಬಾಲಿಸಿ ಹುಡುಕುವೆನು" (ಯೆಹೆಜ್ಕೇಲ 34:11) ಎಂದು ತೀರ್ಮಾನಿಸಿದನು.

ದೇವರು ತನ್ನ ವಾಗ್ದಾನವನ್ನು ಹೇಗೆ ನೆರವೇರಿಸಿದನು ಎಂಬುದು ಯೇಸು ಕ್ರಿಸ್ತನಲ್ಲಿ, ದಾವೀದನ ಕುಮಾರನಲ್ಲಿ ಕಂಡು ಬರುತ್ತದೆ. "ನನ್ನ ಮಂದೆಯನ್ನು ಕಾಯಲಿಕ್ಕೆ ಒಬ್ಬನೇ ಕುರುಬನನ್ನು ಏರ್ಪಡಿಸುವೆನುಣಿ ನನ್ನ ಸೇವಕನಾದ ದಾವೀದನೆಂಬ ಆ ಕುರುಬನು ಅದನ್ನು ಮೇಯಿಸುವನುಣಿ ಹೌದು, ಅದರ ಕುರುಬನಾಗಿ ಅದನ್ನು ಮೇಯಿಸುತ್ತಾ

ಬರುವನು" (ಯೆಹೆಜ್ಕೇಲ 34:23) ಎಂದು ದೇವರು ಹೇಳಿದನು. ಪ್ರವಾದಿಸಲ್ಪಟ್ಟ "ದಾವೀದನು," ಯೇಸುವು, ದೇವರ ಹಿಂದಿನ ಕುರುಬರುಗಳು ಇದ್ದಂತೆ ಕೂಲಿಯಾಳು ಆಗಿರುವದಿಲ್ಲ. ಒಳ್ಳೆಯ ಕುರುಬನಂತೆ, ಆತನು ಕುರಿಗಳಿಗಾಗಿ ತನ್ನ ಪ್ರಾಣಕೊಡುವನು (ಯೋಹಾನ 10:11). ಆತನು ಹೊಡೆಯಲ್ಪಡುವನು (ಜೆಕರ್ಯ 13:7ಣಿ ಮತ್ತಾಯ 26:31), ಆದರೆ ದೇವರು "ನಿತ್ಯ ಒಡಂಬಡಿಕೆಯ ರಕ್ತದ ಮೂಲಕ ಕುರಿ ಹಿಂಡಿಗೆ ಮಹಾ ಕುರುಬನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದನು" (ಇಬ್ರಿಯ 13:20). ಈ ಒಡಂಬಡಿಕೆಯ ಮುಖಾಂತರವಾಗಿ ನಾವು "ಸತತವಾಗಿ ಕುರಿಗಳಂತೆ ದಾರಿತಪ್ಪಿ ಅಲೆಯುತ್ತಿದ್ದರೂ" ಈಗ ನಾವು "(ನಮ್ಮ) ಆತ್ಮಗಳನ್ನು ಕಾಯುವ ಕುರುಬನೂ ಸಂರಕ್ಷಕನೂ ಆಗಿರುವಾತನ ಬಳಿಗೆ ಹಿಂದಿರುಗಿ ಬಂದಿದ್ದೇವೆ" (1 ಪೇತ್ರ 2:25). ನಾವು ಯೆಹೂದ್ಯರೇ ಆಗಿರಲಿ ಅನ್ಯರೇ ಆಗಿರಲಿ, ಮಹಾಕುರುಬನು ತನ್ನ ಬಳಿಗೆ ಬರುವವರನ್ನು ನಯವಾಗಿ ಜೋಪಾಸನೆ ಮಾಡುವನು. ಇದರ ಪರಿಣಾಮವಾಗಿ ಒಂದೇ ಮಂದೆಯಿರುವುದು ಮತ್ತು ಒಬ್ಬನೇ ಕುರುಬನಿರುವನು (ಯೋಹಾನ 10:16).

ಹಳೇ ಒಡಂಬಡಿಕೆಯಲ್ಲಿ ಸಹಾಯಕ ಕುರುಬರಂತೆ ತನ್ನ ಪ್ರತಿನಿಧಿಯಾಗಿರಲು ದೇವರು ಮಾನವರನ್ನು ಆಯ್ದುಕೊಂಡನುಣಿ ಹಾಗೆಯೇ ಇಂದು ಸಭೆಗಳ ಹಿರಿಯರು ಕುರುಬರಾಗಿದ್ದಾರೆ (1 ಪೇತ್ರ 5:1, 2). ಹಿರಿಯರಿಗೆ ದೇವರಮಂದೆಯ ಜೋಪಾಸನೆಯು ಕೊಡಲ್ಪಟ್ಟಿದೆ (ಅಪೊಸ್ತಲರ ಕೃತ್ಯ 20:28ಣಿ 1 ಪೇತ್ರ 5:1-4). ಹಳೇ ಒಡಂಬಡಿಕೆಯ ಸಹಾಯಕ ಕುರುಬರು ಮಹಾ *Ro'eh*ಗೆ ಲೆಕ್ಕ ಒಪ್ಪಿಸಬೇಕಾಗಿದ್ದಂತೆ, ಕರ್ತನ ಕುರಿಯ ಸಭಾ ಪಾಲಕರು ಪ್ರಧಾನ ಕುರುಬನಿಗೆ ಲೆಕ್ಕ ಒಪ್ಪಿಸಬೇಕಾಗಿರುವುದು (1 ಪೇತ್ರ 5:4).

ಒಂದು ದಿನ ಪ್ರಧಾನ ಕುರುಬನು ವ್ಯಕ್ತಿಯಾಗಿ ಕಂಡುಬರುವನು:

> ಇಗೋ, ಕರ್ತನಾದ ಯೆಹೋವನು ಬಲದೊಂದಿಗೆ ಬರುವನು,
> ತನ್ನ ಭುಜದಿಂದಲೇ ಆಳುವನು.
> ಇಗೋ, ಆತನ ಬಹುಮಾನವು ಆತನೊಂದಿಗಿದೆ,
> ಆತನ ಪ್ರತಿಫಲವು ಆತನ ಮುಂದಿದೆ.
> ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು,
> ಕುರಿಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿಕೊಳ್ಳುವನು,
> ಹಾಲು ಕುಡಿಸುವ ಕುರಿಗಳನ್ನು ಮೆಲ್ಲಗೆ ನಡಿಸುವನು
> (ಯೆಶಾಯ 40:10, 11).

## "ಅರಸನು"

ಯೆಶಾಯನು ಕರ್ತನನ್ನು *Melek,* "ಅರಸನು," ಉನ್ನತನು ಮತ್ತು ಮೇಲಕ್ಕೆತ್ತ ಲ್ಪಟ್ಟವನು, ಸಿಂಹಾಸನದ ಮೇಲೆ ಕುಳಿತಿರುವಾತನು ಎಂದು ನೋಡಿದನುಣಿ ಆತನ ವಸ್ತ್ರದ ಸೆರಗು ಮಂದಿರದಲ್ಲೆಲ್ಲಾ ಹರಡಿತ್ತು. "ಯೆಹೋವನು ಯುಗಯುಗಾಂತರ ಗಳಲ್ಲಿಯೂ ಅರಸನಾಗಿರುವನು" (ಕೀರ್ತನೆ 10:16ಎ). ಆತನ ಸಾರ್ವಭೌಮತೆಯು ವಿಶಾಲವಾಗಿದೆ: "ಇಗೋ, ಜನಾಂಗಗಳು ನೀರಿನ ತೊಟ್ಟಿಯಿಂದ ಬೀಳುವ ಹನಿಯಂತೆ ಇರುವವು ಮತ್ತು ತಕ್ಕಡಿಯಲ್ಲಿಯ ಧೂಳಿನಂತೆ ತಿಳಿಯಲ್ಪಡುವವು" (ಯೆಶಾಯ 40:15ಎ). "ಯೆಹೋವನು ಜಲಪ್ರಳಯದ ಮೇಲೆ ಅರಸನಂತೆ ಆಸೀನನಾಗಿದ್ದಾಗ" (ಕೀರ್ತನೆ 29:10ಎ) ಆತನ ತೀರ್ಮಾನವು ಸಂಪೂರ್ಣವಾದದ್ದಾಗಿತ್ತು. ಆತನದು ಮಿತಿಯಿಲ್ಲದ ಏಕಾಧಿಪತ್ಯವಾಗಿತ್ತು.

"ಸರ್ವ ಜನಾಂಗಗಳ ಅರಸನಿಗೆ" (ಪ್ರಕಟನೆ 15:3) ಕ್ರೈಸ್ತ ಯುಗದಲ್ಲಿ ಪರಲೋಕ ದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು ತನ್ನ ಕುಮಾರನಿಗೆ ಕೊಡಲು ಸಂತೋಷವಾಯಿತು (ಮತ್ತಾಯ 28:18), "ಹಾಗಾದರೆ ನೀನು ಅರಸನೋ?" ಎಂಬ ಪಿಲಾತನ ಪ್ರಶ್ನೆಗೆ (ಯೋಹಾನ 18:37ಎ), ಯೇಸುವಿನ ಉತ್ತರವು ಸರಿಯಾದದ್ದಾಗಿತ್ತು: "ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು, ಅದಕ್ಕೋ ಸ್ಕರವೇ ಈ ಲೋಕಕ್ಕೆ ಬಂದಿದ್ದೇವೆ" (ಯೋಹಾನ 18:37ಬಿ). ಹೀಗಿದ್ದರೂ ತನ್ನ ರಾಜ್ಯವು ಈ ಲೋಕದ್ದಲ್ಲ ಎಂದು ದೇಶಾಧಿಪತಿಗೆ ಸ್ಪಷ್ಟಪಡಿಸಿದನು (ಯೋಹಾನ 18:36), ಲೋಕದ ಎಲ್ಲಾ ರಾಜ್ಯಗಳನ್ನು ಮತ್ತು ಅವುಗಳ ಮಹಿಮೆಯನ್ನು ಸೈತಾನನು ಕೊಡುವನೆಂದು ಹೇಳಿದಾಗ ಆತನು ಲೋಕದ ಅಧಿಕಾರವನ್ನು ತಿರಸ್ಕರಿಸಿದನು (ಮತ್ತಾಯ 4:8, 9). ತನ್ನನ್ನು ರಾಜನನ್ನಾಗಿ ಮಾಡಲು ತನ್ನ ಹಿಂಬಾಲಕರಿಗೆ ಆತನು ಒಪ್ಪಿಕೊಳ್ಳಲಿಲ್ಲ, ನಿರಾಕರಿಸಿದನು (ಯೋಹಾನ 6:15). ಆತನು ಕತ್ತೆಯ ಮೇಲೆ ಕುಳಿತುಕೊಂಡು ಯೆರೂಸಲೇಮಿನೊಳಗೆ ಹೋದಾಗ ಅರಸನೆಂದು ಜಯಕಾರ ಮಾಡಲ್ಪಟ್ಟಾಗ ಆತನಿಗೆ ಸೈನಿಕರಿರಲಿಲ್ಲ. ಕೈಸರನಿಗೆ ವಿರೋಧವಾಗಿ ಇರುವವನು ಬಂದಿದ್ದಾನೆ ಎಂದು ಯಾರೂ ಯೋಚಿಸಲಿಲ್ಲ (ಯೋಹಾನ 12:15). ನಿಜವಾಗಿಯೂ ಆ ಸಂದರ್ಭದಲ್ಲಿ ಯೇಸುವು ಇನ್ನೂ ಅರಸನಾಗಿರಲಿಲ್ಲ಼ ಆತನು ಪರಲೋಕಕ್ಕೆ ಹಿಂದಿರುಗಿ ಹೋಗುವವರೆಗೆ ಆತನು ಆಗಿರಲಿಲ್ಲ. ಹೀಗಿದ್ದರೂ ಆತನನ್ನು ಪ್ರೀತಿಸಿದವರ ಸ್ವಂತ ಸ್ತೋತ್ರವನ್ನು ಆತನು ಸ್ವೀಕರಿಸಿದನು. ಅವರ ಹೃದಯಗಳಲ್ಲಿ ಆತನು ಆಗಲೇ ಆಳುತ್ತಿದ್ದನು.

ವಿಧೇಯನಾಗುವದನ್ನು ಯೇಸು ಕಲಿತುಕೊಂಡಾಗ (ಇಬ್ರಿಯ 5:8) ಮತ್ತು ಮರಣದ ಮೇಲೆ ಜಯಹೊಂದಿದ ಮೇಲೆ (ಇಬ್ರಿಯ 2:14), ಆತನು ಉನ್ನತಕ್ಕೆ ಏರಿ ಹೋದನು. ಪರಲೋಕದ ಬಾಗಿಲುಗಳನ್ನು ಯೇಸು ಸಮೀಪಿಸಿದಾಗ ಪರಲೋಕವು ಸಂಭ್ರಮದಿಂದ ತುಂಬಿಕೊಂಡಿತ್ತು. ಕೂಗುವಂಥದ್ದು ದ್ವಾರಗಳಿಗೂ ಬಾಗಿಲುಗಳಿಗೂ ಹೋಯಿತು:

> ದ್ವಾರಗಳೇ, ನಿಮ್ಮ ತಲೆಗಳನ್ನು ಎತ್ತಿರಿ಼
> ಪುರಾತನವಾದ ದ್ವಾರಗಳೇ ಎತ್ತಲ್ಪಡಿರಿ಼
> ಮಹಾ ಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ!
> (ಕೀರ್ತನೆ 24:7).

"ಮಹಾ ಪ್ರಭಾವುಳ್ಳ ಅರಸನು ಯಾರು?" ಎಂದು ಪರಲೋಕದ ದ್ವಾರಗಳೂ ಕದಗಳೂ ಕೇಳಿದಾಗ, "ಬಲವೂ ಪರಾಕ್ರಮವೂ ಉಳ್ಳ ಯೆಹೋವನು಼ ಯುದ್ಧದಲ್ಲಿ ಪರಾಕ್ರಮವುಳ್ಳ ಯೆಹೋವನು" (ಕೀರ್ತನೆ 24:8) ಮತ್ತು "ಸೇನಾಧಿಪತಿಯಾದ ಯೆಹೋವನೇ಼ ಈತನೇ ಮಹಾ ಮಹಿಮೆಯುಳ್ಳ ಅರಸನು" (ಕೀರ್ತನೆ 24:10) ಎಂದು ಉತ್ತರ ಬಂದಿತು.

ನಿಜವಾದ ಸಿಂಹಾಸನಾರೋಹಣವು ದಿವಾರೋಹಣದ ನಂತರ ಹತ್ತು ದಿನಗಳ ಮೇಲೆ ನೇಮಿಸಲ್ಪಟ್ಟಿತು಼ ಅದು ದೇವರ ನೇಮಕದ ಪ್ರಕಾರ ಪಂಚಾಶತ್ತಮ ದಿನದಂದು ಬಂದಿತು. ತಂದೆಯಾದ ದೇವರು ತನ್ನ ಕುಮಾರನನ್ನು, "ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು" (ಕೀರ್ತನೆ 110:1) ಎಂದು ಹೇಳಿ ಆಹ್ವಾನಿಸಿದನು. ಕೊನೆಯ ವೈರಿಯು ನಾಶಪಡಿಸಲ್ಪಡುವ ತನಕ ಆತನು ದೇವರ ಬದಲಾಗಿ ಆಳಿಕೆ ಮಾಡುವನು (1 ಕೊರಿಂಥ 15:25, 26).

ಅಲಂಕಾರಿಕವಾಗಿ ಮಾತಾಡುವದಾದರೆ, ದೇವರು ತನ್ನ ಮಗನ ತಲೆಯ ಮೇಲೆ ಪಂಚಾಶತ್ತಮ ದಿನದ ಭಾನುವಾರದಂದು ಅಭಿಷೇಕ ತೈಲವನ್ನು ಸುರಿಸಿದನು (ಇಬ್ರಿಯ 1:8, 9). ಇದು ಕ್ರಿ.ಶ. 30 ಮೇ 26ರಂದು ಆಗಿರುವ ಸಾಧ್ಯತೆಯಿದೆ. ಯೇಸುವು ನಿಜವಾಗಿಯೂ "ಭಾಗ್ಯವಂತನಾದ ಏಕಾಧಿಪತಿಯೂ, ರಾಜಾಧಿ ರಾಜನೂ ಕರ್ತನ ಕರ್ತನೂ" ಆದನು (1 ತಿಮೊಥೆ 6:15).

ಯೇಸುವು ತನ್ನ ತಂದೆ ದಾವೀದನ ಸಿಂಹಾಸನದ ಮೇಲೆ ಕುಳಿತು ಕೊಂಡಿರುವಾಗಲೂ ಆತನ ಆಡಳಿತೆಯು ಭೋಗಾಸಕ್ತಿಯುಳ್ಳದ್ದೂ, ಶಾರೀರಿಕವಾದದ್ದೂ ಆಗಿರುವದಿಲ್ಲ. ಆತನ ಸಿಂಹಾಸನವು "ಕೃಪಾವಾತ್ಸಲ್ಯದಲ್ಲಿ" ಸ್ಥಾಪಿಸಲ್ಪಟ್ಟಿತು. ಅದನ್ನು ಅನುಭವಿಸುವವನು ನ್ಯಾಯವನ್ನು ಹುಡುಕುವವನೂ ಮತ್ತು "ನೀತಿಗೋಸ್ಕರ ತ್ವರೆಪಡುವವನೂ" (ಯೆಶಾಯ 16:5) ಆಗಿರುವನು. ಆತನ ರಾಜ್ಯವು "ನೀತಿಯೂ ಸಮಾಧಾನವೂ ಪವಿಶುದ್ಧಾತ್ಮನಿಂದಾಗುವ ಆನಂದವೂ" ತುಂಬಿರುವ ರಾಜ್ಯವಾಗಿರುವುದು (ರೋಮಾಪುರ 14:17).

ಎಲ್ಲಾ ಮನುಷ್ಯರನ್ನು ಆತನು ಸತ್ತವರೊಳಗಿಂದ ಮೇಲಕ್ಕೆ ತರುವಾಗ, ಕೊನೆಯ ವೈರಿ, ಮರಣವು ನಿರ್ಮೂಲವಾಗುವುದು (1 ಕೊರಿಂಥ 15:26). ಆ ಸಮಯದಲ್ಲಿ ಆತನು ತನ್ನ ತಂದೆಗೆ ರಾಜ್ಯವನ್ನು ಒಪ್ಪಿಸಿಕೊಡುವನು (1 ಕೊರಿಂಥ 15:24). ಆಗ ಆತನು ತಾನೇ, ಎಲ್ಲಾ ಮನುಷ್ಯರೊಂದಿಗೂ ದೇವದೂತರೊಂದಿಗೂ, ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗಿರುವಂತೆ, ಸಮಸ್ತವನ್ನೂ ತನಗೆ ಅಧೀನಮಾಡಿಕೊಟ್ಟವನಿಗೆ ಅಧೀನನಾಗುವನು (1 ಕೊರಿಂಥ 15:28).

## "ವಿಮೋಚಕನು"

ಮಾನವರೊಂದಿಗೆ ವ್ಯವಹರಿಸುವಲ್ಲಿ ದೇವರ ಪಾತ್ರವನ್ನು ಪ್ರತಿಬಿಂಬಿಸುವ ಇನ್ನೊಂದು ಪದವು *Go'el* ಎಂಬುದು. ಇದು ವ್ಯಾಜ್ಯವಾಡುವವನು, ದೋಷ ನಿವಾರಣೆ ಮಾಡುವವನು ಅಥವಾ ವಿಮೋಚಕನನ್ನು ಸಂಬಂಧಿಸಿರುತ್ತದೆ, ಈ ಹೆಸರು ಸೊಲೊಮೋನನಿಂದ ಜ್ಞಾನೋಕ್ತಿ 23:10, 11 ಮತ್ತು ಯೋಬನಿಂದ ಯೋಬ 19:25-27ರಲ್ಲಿ ಉಪಯೋಗಿಸಲ್ಪಟ್ಟಿದೆ.

### ದೋಷ ನಿವಾರಕನು (A Vindicator)

ದೇವರು *Go'el* ನಂತೆ ಇಸ್ರಾಯೇಲ್ಯರ ವ್ಯಾಜ್ಯವಾಡುವಾತನು ಇಲ್ಲವೇ ದೋಷ ನಿವಾರಕನು ಆಗಿದ್ದನು. ಮೇರೆಗಳನ್ನು ದಾಟಿ, ಭೂಮಿಯನ್ನು ಕದ್ದುಕೊಳ್ಳುವುದು ಆತನ ದೃಷ್ಟಿಯಲ್ಲಿ ಗಂಭೀರವಾದ ವಿಷಯವಾಗಿತ್ತು. ಅನಾಥರ ಹಕ್ಕುಗಳನ್ನು ಅತಿಕ್ರಮಿಸುವುದೂ ಸಹ ಆತನ ದೃಷ್ಟಿಯಲ್ಲಿ ಗಂಭೀರವಾದದ್ದಾಗಿತ್ತು (ಜ್ಞಾನೋಕ್ತಿ 23:10). ಮನನೊಂದವರಿಗೆ ಒಬ್ಬ *go'el*, ಒಬ್ಬ ವಿಮೋಚಕನ ಅವಶ್ಯಕತೆಯಿತ್ತು. ಸೊಲೊಮೋನನು ಇದನ್ನು ದೇವರ ಪಾತ್ರದಲ್ಲಿ ಒಂದು ಎಂದು ದೃಷ್ಟಿಸಿದನು. ಅವನು ದೇವರನ್ನು "ಬಲಶಾಲಿ" ಎಂದು, ಅವನ ಪರವಾಗಿ "ವ್ಯಾಜ್ಯವಾಡುವಾತನು" ಎಂದು ವಿವರಿಸಿದನು (ಜ್ಞಾನೋಕ್ತಿ 23:11).

ಯಾರೂ ಇಲ್ಲದೇ, ತನ್ನ ಹೆಂಡತಿಯ ಸಹಾನುಭೂತಿಯೂ ಇಲ್ಲದೇ ಯೋಬನು ಶ್ರಮೆಪಡುತ್ತಿದ್ದಾಗ ತನ್ನ ಸ್ವಭಾವದ ದೋಷ ನಿವಾರಣೆ ಮಾಡಲು ತನಗೋಸ್ಕರ ಒಬ್ಬ ಸ್ನೇಹಿತನು ಇರುವನೆಂಬುದನ್ನು ಅವನು ತಿಳಿದಿದ್ದನು:

> ನಾನಂತು, ನನ್ನ ವಿಮೋಚಕನು ಜೀವಿಸುತ್ತಾನೆಂದು ಬಲ್ಲೆನು, ಆತನು ಕಡೆಗೆ ಭೂಮಿಯ ಮೇಲೆ ನಿಂತು ಕೊಳ್ಳುವನು. ನನ್ನ ಚರ್ಮವು ಬಿರಿದು ಹಾಳಾದ ಬಳಿಕ, ದೇಹಧಾರಿಯಾಗಿಯೇ ದೇವರನ್ನು ನೋಡುವೆನುಟಿ ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಬೇರೆಯವರಲ್ಲ ... (ಯೋಬ 19:25-27).

ತಾನು ಸಾಯುವದಕ್ಕಿಂತ ಮೊದಲು ದೇವರು ತನ್ನ ದೋಷ ನಿವಾರಣೆ ಮಾಡುವನೆಂದು ಅವನು ತಿಳಿದಿರಲಿಲ್ಲ. ಈ ಜೀವನದಲ್ಲಿ ದೋಷ ನಿವಾರಣೆಯ ಬಗ್ಗೆ ಅವನಿಗೆ ನಿರಾಶೆಯಿತ್ತು. ತಾನು ಸಾಯಬೇಕು ಮತ್ತು ತನ್ನ ಶ್ರಮೆಯು ತೆಗೆದು ಹಾಕಲ್ಪಡಬೇಕು ಎಂದು ಬಯಸಿದನು. ಹೀಗಿದ್ದರೂ ಜೀವಿಸುವ ದೋಷ ನಿವಾರಕನಲ್ಲಿ ಅವನಿಗೆ ಬಲವಾದ ನಂಬಿಕೆಯಿತ್ತು. ಆತನು ಅವನನ್ನು ಧೂಳಿನಿಂದ ಮೇಲಕ್ಕೇಳುವದಕ್ಕೆ ಕಾರಣವಾಗುವನು ಮತ್ತು ನಾಶವಿಲ್ಲದ ಕಣ್ಣುಗಳಿಂದ ದೇವರನ್ನು ನೋಡುವೆನೆಂಬ ಭರವಸೆಯಿತ್ತು.

### ಕ್ರಯಕೊಟ್ಟು ಬಿಡಿಸುವಾತನು (A Ransomer)

ಕೆಲವುಸಲ *go'el* ಪದವನ್ನು ವಿಶೇಷ ಕ್ರಯಕೊಟ್ಟು ಬಿಡಿಸುವಾತನಿಗೆ ಸಂಬಂಧಿಸಿ ಇರುತ್ತದೆ. ಒಬ್ಬ ಇಸ್ರಾಯೇಲನು ತನ್ನ ಭೂಮಿಯನ್ನು ಮಾರಲು ಒತ್ತಾಯಿಸಲ್ಪಟ್ಟಾಗ ಅವನ ಸಮೀಪದ ಬಂಧುವು ಮೋಶೆಯ ನಿಯಮದ ಪ್ರಕಾರ ಆ ಭೂಮಿಯನ್ನು ಹಿಂದಿರುಗಿ ಕೊಂಡುಕೊಳ್ಳುವ ಹಕ್ಕನ್ನು ಪಡೆದುಕೊಂಡಿರುತ್ತಾನೆ (ಯಾಜಕಕಾಂಡ 25:23-25). ಅಂಥ ಸಮೀಪ ಬಂಧವು *go'el,* ವಿಮೋಚಕನು ಎಂದು ಕರೆಯಲ್ಪಟ್ಟಿದ್ದಾನೆ. ರೂತಳ ಪುಸ್ತಕವು ಒಂದು ಕುತೂಹಲಕಾರಿ ಉದಾಹರಣೆಯನ್ನು ಒದಗಿಸುತ್ತದೆ. ನಯೋಮಿಯ ಸಮೀಪದ ಬಂಧುವು ವಿಮೋಚಿಸುವ ಹಕ್ಕನ್ನು ತಿರಸ್ಕರಿಸಿದಾಗ, ಭೋವಜನು ಆಕೆಯ *go'el,* ವಿಮೋಚಕನಾದನು. ಅವನು ಭೂಮಿಯನ್ನು ಕೊಂಡುಕೊಂಡನು, ಮತ್ತು ಈ ವ್ಯವಹಾರದಲ್ಲಿ ಮದುಮಗಳನ್ನು ಪಡೆದುಕೊಂಡನು.

ಬಬಿಲೋನಿನ ಸೆರೆಯಲ್ಲಿದ್ದವರಿಗಾಗಿ ದೇವರೂ ಸಹ *Go'el,* ವಿಮೋಚಕನು, ಕ್ರಯಕೊಟ್ಟು ಬಿಡಿಸುವಾತನು ಆಗಿದ್ದನು. ಆತನು ಅವರನ್ನು ಯೆರುಬ್ಬಾಬೆಲ, ಎಜ್ರ ಮತ್ತು ನೆಹೆಮೀಯರ ನೇತೃತ್ವದಲ್ಲಿ ನೂತನ ಹೃದಯ ಮತ್ತು ನೂತನ ಆತ್ಮದೊಂದಿಗೆ ಹಿಂದಿರುಗಿ ಕರತಂದನು (ಯೆಹೆಜ್ಕೇಲ 36:26). ಇಸ್ರಾಯೇಲನ *Go'el,* ಬಲಶಾಲಿಯಾಗಿದ್ದನು. ಆತನು ಜನರ ವಿಷಯಗಳಲ್ಲಿ ಬಲವಾಗಿ ವಾದಿಸುವವನಾಗಿದ್ದನು (ಯೆರೆಮೀಯ 50:34). ಅವರ ಮಾರ್ಗವು ಪವಿತ್ರತೆಯ ಮಾರ್ಗ ಎಂದು ಕರೆಯಲ್ಪಡುವುದು. ಅಶುದ್ಧರು ಅದನ್ನು ದಾಟಿಹೋಗಲಾರರು. ಅದು ಬಿಡುಗಡೆ ಹೊಂದಿದವರಿಗಾಗಿತ್ತು. ಅವರಿಗೆ ನೂತನ ಹೃದಯ ಮತ್ತು ನೂತನ ಆತ್ಮವಿದ್ದರೆ, ಪವಿತ್ರತೆಯ ಮಾರ್ಗ ಅವರಿಗೆ ಸ್ಪಷ್ಟವಾಗಿತ್ತು. ಪ್ರಯಾಣಿಕರಾದ ಮನುಷ್ಯರೂ ಸರಳ ವ್ಯಕ್ತಿಗಳೂ ಸಹ ನೀತಿಯ ಮಹಾ ಮಾರ್ಗಗಳನ್ನು ಹೇಗೆ ಅನುಸರಿಸಬೇಕೆಂಬುದನ್ನು ಅರ್ಥ ಮಾಡಿಕೊಳ್ಳುವರು. ದೇವರಿಂದ ಬಿಡುಗಡೆ ಹೊಂದಿದವರು ಹಾಡುತ್ತ ಚೀಯೋನಿಗೆ ಹಿಂದಿರುಗುವರು. ಅವರ ತಲೆಗಳ ಮೇಲೆ ನಿತ್ಯವಾದ ಆನಂದವು ಬರುವುದು. ಅವರು ಸಂತೋಷವನ್ನೂ ಆನಂದವನ್ನೂ ಹೊಂದಿಕೊಳ್ಳುವರು. ಆಗ ದು ಖವೂ ನಿಟ್ಟುಸಿರೂ ಅವರಿಂದ ದೂರ ಓಡಿಹೋಗುವವು (ಯೆಶಾಯ 35:8-10). ದೇವರು, ಇಸ್ರಾಯೇಲನ್ನು ಸೃಷ್ಟಿಸಿದಾತನು, ಈಗ ಅವರ *Go'el* ನಂತೆ ಇನ್ನೊಂದು ವಿಶೇಷತೆ ಹೊಂದಿದ್ದಾನೆ: "ನಾನು ನಿನ್ನನ್ನು ವಿಮೋಚಿಸಿದ್ದೇನೆ" (ಯೆಶಾಯ 43:1).

ಅನ್ಯ ಶಕ್ತಿಯಿಂದ ಬಿಡುಗಡೆ ಮಾಡಲ್ಪಡುವದಕ್ಕಿಂತ ಹೆಚ್ಚಾಗಿ ವಿಮೋಚನೆಯ ಹೆಚ್ಚು

ದೊಡ್ಡದಾದ ಸಂಗತಿಯು ಪಾಪದಿಂದ ಬಿಡುಗಡೆಯಾಗುವುದು ಆಗಿದೆ (ಕೊಲೊಸ್ಸೆ 1:14). ತನ್ನನ್ನೆ ಈಡಾಗಿ ಕೊಟ್ಟ ಯೇಸುವಿನ ಮುಖಾಂತರ ದೇವರು ಈ ವಿಮೋಚನೆಯನ್ನು ಒದಗಿಸುವನು (ಮತ್ತಾಯ 20:28). ಮೊದಲನೆಯ ಒಡಂಬಡಿಕೆಯ ಕೆಳಗೆ ಮಾಡಿದ ಅಪರಾಧಗಳಿಗೆ ಮಾತ್ರವೇ ಅಲ್ಲ (ಇಬ್ರಿಯ 9:15) ಆದರೆ "ಇಡೀ ಲೋಕದ" ಪಾಪಗಳಿಗಾಗಿಯೂ ಸಹ (1 ಯೋಹಾನ 2:2) ಆತನು ತನ್ನ "ಅಮೂಲ್ಯ ರಕ್ತ" ಕೊಟ್ಟನು (1 ಪೇತ್ರ 1:19). *Go'el*ನಂತೆ, ವಿಮೋಚಕನಂತೆ, ಯೇಸು ಹೀಗೆ ತನಗೆ ವಿಧೇಯರಾಗುವವರು "ನಿತ್ಯವಾದ ಬಾಧ್ಯತೆಯ ವಾಗ್ದಾನವನ್ನು ಸ್ವೀಕರಿಸುವಂತೆ" (ಇಬ್ರಿಯ 9:12, 15) "ನಿತ್ಯವಿಮೋಚನೆಯನ್ನು" ಒದಗಿಸಿಕೊಟ್ಟನು.

## "ತಂದೆ"

ದೇವರು ನಿಜವಾದ ತಂದೆಯಲ್ಲ ಎಂಬುದನ್ನು ಆಗಲೇ ತೋರಿಸಿಕೊಡಲಾಗಿದೆ. ಹೀಗಿದ್ದರೂ, ನಮ್ಮ ತಂದೆಯಂತೆ ಆತನ ಪಾತ್ರವು ಹಳೇ ಒಡಂಬಡಿಕೆಯಲ್ಲಿ ಅತೀ ಹೆಚ್ಚಾಗಿ ಮೆಚ್ಚಿಕೆಯಾದ ಮತ್ತು ಹೃದಯ ಪೂರ್ವಕವಾದ ದೃಷ್ಟಾಂತಗಳಲ್ಲಿ ಒಂದಾಗಿದೆ.[1]

### ಇಸ್ರಾಯೇಲ್ಯರು ದೇವರ ಚೊಚ್ಚಲು ಮಗುವಿನಂತೆ

ದೇವರನ್ನು ತಂದೆಯಂತೆ ಅಲಂಕಾರಿಕವಾಗಿ ಚಿತ್ರಿಸಿದ್ದು ಮೊದಲು ಇಸ್ರಾಯೇಲಿನ ಹನ್ನೆರಡು ಗೋತ್ರಗಳಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ. ಅವರು ಒಟ್ಟಾಗಿ ಒಂದು ಸಮಾಜವಾಗಿ ಅಂದರೆ ಒಬ್ಬ ಮಗುವಿನಂತೆ ತಿಳಿಯಲ್ಪಟ್ಟಿದ್ದಾರೆ. "ಇಸ್ರಾಯೇಲ್ ಜನರು ನನ್ನ ಮಗನು, ನನ್ನ ಚೊಚ್ಚಲ ಮಗನು" (ವಿಮೋಚನಕಾಂಡ 4:22). ದೇವರ ಚೊಚ್ಚಲ ಮಗನೆಂದು ವಿವರಿಸಲ್ಪಟ್ಟ ಇಸ್ರಾಯೇಲ್ಯರು ಐಗುಪ್ತನ್ನು ಬಿಟ್ಟು ಹೋಗಲು ಫರೋಹನು ನಿರಾಕರಿಸಿದ್ದರಿಂದ ಕರ್ತನು ಅವನಿಗೆ, "ಇಗೋ ನಾನು ನಿನ್ನ ಮಗನನ್ನು ಅಂದರೆ ನಿನ್ನ ಚೊಚ್ಚಲ ಮಗನನ್ನು ಸಾಯಿಸುವೆನು" (ವಿಮೋಚನಕಾಂಡ 4:23) ಎಂದು ಹೇಳಿದನು. ದೇವರ ಮಗನಾದ ಇಸ್ರಾಯೇಲು ಕಠಿಣವಾದ ದಾಸತ್ವದಲ್ಲಿ ಶ್ರಮೆ ಪಡುತ್ತಿದ್ದಾಗ, ಆ ಜನಾಂಗದ ಕಡೆಗಿದ್ದ ದೇವರ ಪ್ರೀತಿಯು ಪಿತೃತ್ವದ ರೀತಿಯಲ್ಲಿ ಪ್ರಕಟಿಸಲ್ಪಟ್ಟಿದೆ: "ಇಸ್ರಾಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯನ್ನಿಟ್ಟು ಆ ನನ್ನ ಮಗನನ್ನು ಐಗುಪ್ತ ದೇಶದಿಂದ ಕರೆದೆನು" (ಹೋಶೇಯ 11:1). ಆಸಕ್ತಿಯುಳ್ಳ ಮತ್ತು ಪ್ರೀತಿಸುವ ತಂದೆಯಂತೆ ಕರ್ತನು ಇಸ್ರಾಯೇಲನ್ನು ತನ್ನ ಕೈಯಲ್ಲಿ ಎತ್ತಿಕೊಂಡನು (ಹೋಶೇಯ 11:3) ಮತ್ತು ಅವನಿಗೆ ನಡೆಯುವದನ್ನು ಕಲಿಸಿದನು.

### ಕ್ರೈಸ್ತರು ದೇವರ ಚೊಚ್ಚಲು ಮಕ್ಕಳಂತೆ

ಇಸ್ರಾಯೇಲು ಅಲ್ಲದೇ ಬೇರೆ ಜನಾಂಗಗಳೂ ದೇವರ ಮಕ್ಕಳಾಗಿದ್ದವು. ಎಲ್ಲಾ ಜನಾಂಗಗಳು "ದೇವರ ಮಕ್ಕಳಾಗಿರುವರು" (ಅಪೊಸ್ತಲರ ಕೃತ್ಯ 17:29). ಹೀಗಿದ್ದರೂ ಅಬ್ರಹಾಮನ ಅಸಾಮಾನ್ಯವಾದ ವಿಶ್ವಾಸದ ನಿಮಿತ್ತ ಅವನಿಂದ ಬಂದ ಇಸ್ರಾಯೇಲ ಜನಾಂಗವು ಕರ್ತನ ಎಲ್ಲಾ ಮಕ್ಕಳಲ್ಲಿ (ಜನಾಂಗಗಳಲ್ಲಿ) ಆತನ ಚೊಚ್ಚಲ ಮಗ ಎಂದು ತಿಳಿಯಲ್ಪಟ್ಟಿತು.

ಒಂದು ಕುಟುಂಬದಲ್ಲಿ ಚೊಚ್ಚಲಾಗಿರುವುದು ವಿಶೇಷ ಮೆಚ್ಚಿಕೆಯಾಗಿದೆ. ಚೊಚ್ಚಲು ಮಗನು ತನ್ನ ತಂದೆಯ ಆಸ್ತಿಯಲ್ಲಿ ಎರಡು ಪಾಲುಗಳನ್ನು ಹೊಂದಿಕೊಳ್ಳುವನು (ಧರ್ಮೋಪದೇಶಕಾಂಡ 21:17). ಅಷ್ಟೇ ಅಲ್ಲ, ಚೊಚ್ಚಲು ಮಗನಾಗಿ, ಅವನು ತನ್ನ

ತಂದೆಯ ಬಲದ ಪ್ರಾರಂಭವು ಎಂದು ಯೋಚಿಸಲ್ಪಟ್ಟಿದ್ದಾನೆ. ಚೊಚ್ಚಲು ಮಗನು ತನ್ನ ತಂದೆಯ "ಬಲ" ಎಂದು ಗೌರವಿಸಲ್ಪಟ್ಟನು. ಗೌರವದಲ್ಲಿಯೂ ಬಲದಲ್ಲಿಯೂ ಅವನಿಗೆ ಪ್ರಾಧಾನ್ಯತೆ ಕೊಡಲ್ಪಟ್ಟಿದೆ (ನೋಡಿರಿ ಆದಿಕಾಂಡ 49:3). ಆದುದರಿಂದ ಚೊಚ್ಚಲು ಮಗನು ಕುಟುಂಬದ ಮಹಿಮೆ ಎಂಬಂತೆ ನೋಡಲ್ಪಟ್ಟನು.

ತನ್ನ ಮಕ್ಕಳನ್ನು ಗೌರವಿಸಲು ಬಯಸಿ, ದೇವರು ಇಸ್ರಾಯೇಲನ್ನು ಜನಾಂಗಗಳಲ್ಲಿ ಮೊದಲನೆಯದನ್ನಾಗಿಟ್ಟನು. ಅದೇ ರೀತಿಯಲ್ಲಿ ಕ್ರೈಸ್ತರನ್ನು ಗೌರವಿಸಲು ಸಂತೋಷ ವುಳ್ಳವನಾಗಿ ಸಭೆಯನ್ನು ಪರಲೋಕದಲ್ಲಿ ಹೆಸರು ಬರೆಯಿಸಿಕೊಂಡಿರುವ ಚೊಚ್ಚಲು ಮಕ್ಕಳ ಸಭೆ (ಇಬ್ರಿಯ 12:23) ಎಂದು ಕರೆಯಲಾಗಿದೆ. ಇವರು ದೇವರ ಮಕ್ಕಳು ಎಂದು ತಿಳಿಯಲ್ಪಟ್ಟಿದ್ದಾರೆ. ಆದರೆ ನೂತನ ಜೀವಿಗಳಾಗುವದರಿಂದ (2 ಕೊರಿಂಥ 5:17) ಕ್ರೈಸ್ತರು ದೇವರ ಚೊಚ್ಚಲು ಮಕ್ಕಳಂತೆ ಯೋಚಿಸಲ್ಪಟ್ಟಿದ್ದಾರೆ. ಅವರಲ್ಲಿ ಆತನು ಸಂತುಷ್ಟನಾಗಿದ್ದಾನೆ.

**ದೇವರ ಮಕ್ಕಳಾಗುವುದು**

ಯಾವುದೇ ದೃಷ್ಟಾಂತವು ಪರಿಪೂರ್ಣವಾಗಿರುವದಿಲ್ಲ. ತಂದೆ/ಮಗು ಎಂಬುದು ಯೋಗ್ಯವಾಗಿದ್ದರೂ ಆಯ್ಕೆಯ ವಿಷಯದಲ್ಲಿ ಕೊರತೆಯುಳ್ಳದ್ದಾಗಿದೆ. ತಾನು ಹುಟ್ಟ ಬೇಕೋ ಇಲ್ಲವೋ ಎಂಬುದರ ವಿಷಯದಲ್ಲಿ ಮಗುವಿಗೆ ಹೇಳುವುದು ಇರುವದಿಲ್ಲ. ಆದರೆ ಆತ್ಮಿಕವಾಗಿ ತಂದೆಯ ಕುಟುಂಬದಲ್ಲಿ ಒಬ್ಬನು ಹೊಸದಾಗಿ ಹುಟ್ಟಬೇಕು (ಯೋಹಾನ 3:3-8).

ಸಹಜವಾದ ಜನನವು ಒಂದು ಕುಟುಂಬದ ಸದಸ್ಯನಾಗಲು ಕ್ರಮ ಪ್ರಕಾರವಾದದ್ದಾಗಿದೆ, ಆದರೆ ದತ್ತು ತೆಗೆದು ಕೊಳ್ಳುವುದು ಇನ್ನೊಂದು ವಿಧವಾಗಿದೆ. ದೇವರ ಕುಟುಂಬದಲ್ಲಿ ಜನರು ದತ್ತು ತೆಗೆದು ಕೊಳ್ಳಲ್ಪಡುವ ವಿಷಯವು ಪವಿತ್ರ ಬರಹದಲ್ಲಿ ಉಪಯೋಗಿ ಸಲ್ಪಟ್ಟಿದೆ (ಗಲಾತ್ಯ 4:4-7).

**ವೈಯಕ್ತಿಕ ಗಮನ**

ಅವಶ್ಯಕತೆಗಳನ್ನು ಒದಗಿಸುವ, ಆದರೆ ತನ್ನ ಮಕ್ಕಳಲ್ಲಿ[2] ವೈಯಕ್ತಿಕ ಆಸಕ್ತಿಯನ್ನು ತೆಗೆದುಕೊಳ್ಳದ ತಂದೆಯನ್ನು ಒಬ್ಬನು ಕಲ್ಪಿಸಲಾರನು. ಒಳ್ಳೆಯ ತಂದೆಯು ವಿಶೇಷ ಗಮನ ಕೊಡುವನು. ಪರಿಶುದ್ಧ ಬರಹಗಾರನು ದೇವರನ್ನು ತಂದೆಯೊಂದಿಗೆ ಹೋಲಿಸುವಂತೆ ವಿಶೇಷ ದೈವ ಅನುಗ್ರಹವನ್ನು ಕೂಡಿಸಲ್ಪಡಬೇಕಾಗುತ್ತದೆ. ಕಡಿಮೆ ತರಗತಿಯ ಭೂಲೋಕದ ತಂದೆಯು ಕಲ್ಲುಗಳನ್ನಾಗಲೀ ಹಾವುಗಳನ್ನಾಗಲೀ ಕೊಡದೇ ರೊಟ್ಟಿಯನ್ನೂ ಮೀನನ್ನೂ ಕೊಡುವದರಲ್ಲಿ ಯೋಚನಾಪರರಾಗುತ್ತಾರೆ. ಹೀಗಿದ್ದರೂ ಇದು ತನ್ನ ಮಕ್ಕಳ ಅಗತ್ಯತೆಗಳಿಗೆ ಸ್ಪರ್ಶಿಸಲ್ಪಡುವ ಹೃದಯವುಳ್ಳ ಪರಲೋಕದ ತಂದೆಯ ಅತ್ಯಲ್ಪವಾದ, ಪ್ರತಿ ಇದಾಗಿರುತ್ತದೆ. ಅವರು ಶ್ರಮೆಪಡುವಾಗ, ಆತನು ಶ್ರಮೆಪಡುತ್ತಾನೆ (ಯೆಶಾಯ 63:9). "ತಂದೆಯು ಮಕ್ಕಳನ್ನು ಕನಿಕರಿಸುವಂತೆ ಯೆಹೋವನು ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕನಿಕರಿಸುತ್ತಾನೆ. ಆತನು ನಮ್ಮ ಪ್ರಕೃತಿಯನ್ನು ಬಲ್ಲನುಣಿ ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ" (ಕೀರ್ತನೆ 103:13, 14).

**ಹಿರಿಯ ಅಣ್ಣ**

ಎಲ್ಲಾ ಕ್ರೈಸ್ತರಿಗೆ ಯೇಸುವು ದೊಡ್ಡ ಸಹೋದರ, ಹಿರಿಯ ಅಣ್ಣ ಎಂದು ದೃಷ್ಟಾಂತ

ವಾಗಿ ಪರಿಶುದ್ಧ ಬರಹಗಳಲ್ಲಿ ಹೇಳಲ್ಪಟ್ಟಿದ್ದಾನೆ. ಆತನು ತನ್ನ ಸಹೋದರನ ಬಗ್ಗೆ ನಾಚಿಕೆ ಪಟ್ಟು ಕೊಳ್ಳುವದಲ್ಲ (ಇಬ್ರಿಯ 2:11). ಅನೇಕರಲ್ಲಿ ಆತನು ಹಿರಿಯನಾಗಿ (ರೋಮಾಪುರ 8:29), ತನ್ನ ಚಿಕ್ಕ ಸಹೋದರ, ಸಹೋದರಿಯರಿಗಾಗಿ ಮಾತನಾಡಲು ಆತನು ಸಂತೋಷ ಪಡುತ್ತಾನೆ. ಅವರ ಪರವಾಗಿ ಆತನು ತಂದೆಗೆ ಮಾತಾಡುತ್ತಾನೆ (1 ಯೋಹಾನ 2:1).

**ಮಕ್ಕಳ ನಡತೆ**

ಮಗುವು ತನ್ನ ತಂದೆಯಂತೆ ಕಾಣುತ್ತಾನೆ. ಹಾಗೆಯೇ, ದೇವರ ಮಕ್ಕಳು ತಮ್ಮ ಕೃತ್ಯಗಳಲ್ಲಿ ತಮ್ಮ ತಂದೆಯಂತೆ ಸಂಪೂರ್ಣರೂ ಪ್ರೌಢರೂ ಆಗಿರಲು ಪ್ರಯತ್ನಿಸುತ್ತಾರೆ. ಪ್ರೀತಿಯ ಮಕ್ಕಳಂತೆ (ಎಫೆಸ 5:1ಣಿ ಮತ್ತಾಯ 5:48) ಅವರು ದೇವರನ್ನು ಅನುಸರಿಸಲು ಪ್ರಯತ್ನಿಸುತ್ತಾರೆ. ಸರ್ವಶಕ್ತನಾದ ಕರ್ತನ ಗಂಡುಮಕ್ಕಳಂತೆ ಮತ್ತು ಹೆಣ್ಣು ಮಕ್ಕಳಂತೆ, ಶರೀರದ ಮತ್ತು ಆತ್ಮದ ಎಲ್ಲಾ ಕೊಳೆಯಿಂದ ಶುದ್ಧೀಕರಿಸಲ್ಪಡಲು ಅವರು ಬಯಸುತ್ತಾರೆ (2 ಕೊರಿಂಥ 7:1). ಯೋಗ್ಯನಾದ ಮಗನು "ತನ್ನ ತಂದೆಯನ್ನು ಗೌರವಿಸುತ್ತಾನೆ" (ಮಲಾಕಿ 1:6), ಮತ್ತು ಸರಿಯಾಗಿ ಯೋಚಿಸುವ ಮಗನು ತನ್ನ ತಂದೆಯನ್ನು ದು ಖಪಡಿಸಿದರೆ ನೋವನ್ನು ಅನುಭವಿಸುತ್ತಾನೆ (ಎಫೆಸ 4:30).

**ಇತರ ಮಕ್ಕಳು**

ಪಿತೃ ಸಂಬಂಧವಾದ ದೃಷ್ಟಾಂತವು ತಂದೆಗೂ ಮತ್ತು ಮಗುವಿಗೂ ಮಧ್ಯದಲ್ಲಿರುವ ನೇರ ಸಂಬಂಧವನ್ನು ಸೂಚಿಸುವದಷ್ಟೇ ಅಲ್ಲ, ಆದರೆ ಮಗುವಿಗೂ ಮತ್ತು ಮಗುವಿಗೂ ಮಧ್ಯದಲ್ಲಿ ನೇರ ಸಂಬಂಧವನ್ನೂ ಸಹ ಸೂಚಿಸುತ್ತದೆ. ಒಬ್ಬನೇ ತಂದೆಯ ಮಕ್ಕಳ ಮಧ್ಯದಲ್ಲಿ (ಮಲಾಕಿಯ 2:10), ಒಬ್ಬರಿಗೊಬ್ಬರಿಗೆ ವಿಶ್ವಾಸಘಾತುಕ ವ್ಯವಹಾರವನ್ನು ಯೋಚಿಸಲಾಗದು. ಒಬ್ಬನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ, ದೇವರ ಮಕ್ಕಳನ್ನೂ ಪ್ರೀತಿಸದಿದ್ದರೆ ಅವರು ಸುಳ್ಳುಗಾರರಾಗಿದ್ದಾರೆ (1 ಯೋಹಾನ 4:20). ತಂದೆಯನ್ನು ಪ್ರೀತಿಸಿ ಇತರರನ್ನು ಪ್ರೀತಿಸುವವರು ತಂದೆಯಿಂದ ಹುಟ್ಟಿದವರಾಗಿರುತ್ತಾರೆ (1 ಯೋಹಾನ 5:1).

## "ಪತಿ"

ಮಾನವರನ್ನು ಕುರಿತು ದೇವರು ತನ್ನ ಬಗ್ಗೆ ಉಪಯೋಗಿಸಿದ ಅತಿ ನಿಕಟವಾದ ಮತ್ತು ಅತೀ ಹೆಚ್ಚು ವೈಯಕ್ತಿಕವಾದ ದೃಷ್ಟಾಂತವು *'Ish,* "ಪತಿ" ಎಂಬುದು. ಗಂಡ ಮತ್ತು ಹೆಂಡತಿಯ ಮಧ್ಯದಲ್ಲಿ ಬಹಳ ಅವಶ್ಯವಾಗಿರುವ, ಬಹಳ ಲಾಭದಾಯಕವಾಗಿರುವ, ಮತ್ತು ಬಹಳವಾಗಿ ಅನುಭವಿಸುವ, ಏಕತೆಯು ಮತ್ತು ಹೊಂದಿಕೊಳ್ಳುವ ಸಂಗತಿಯಾಗಿರುವುದು *'Ish-'ishshah* - ಗಂಡ/ಹೆಂಡತಿ ದೃಷ್ಟಾಂತವು ಎಲ್ಲಕಿಂತ ಹೆಚ್ಚಾಗಿ ಮೆಚ್ಚಿಕೆಯುಳ್ಳದ್ದಾಗಿದೆ.

**ಇಸ್ರಾಯೇಲ್**

*ಇಸ್ರಾಯೇಲು ಪ್ರೇಯಸಿಯಂತೆ.* ಇಸ್ರಾಯೇಲು "ತನ್ನ ಯೌವನದ ದಿನಗಳಲ್ಲಿರುವ" ಮಹಿಳೆಗೆ ಹೋಲಿಸಲ್ಪಟ್ಟಿದ್ದು (ಹೋಶೇಯ 2:15) ಕರ್ತನನ್ನು ಪ್ರೀತಿಸಿದ ಮತ್ತು ವಿವಾಹ ವಾಗುವ ಸೂಚನೆಯನ್ನು ಸ್ವೀಕರಿಸಿದ ಹಾಗೆ ಇತ್ತು (ಯೆರೆಮೀಯ 2:2). ಸಾಗುವಳಿ ಮಾಡದೇ ಇದ್ದ ಪ್ರದೇಶದಲ್ಲಿ, ಅರಣ್ಯದಲ್ಲಿ ಆತನನ್ನು ಹಿಂಬಾಲಿಸಲು ಆಕೆ ಸಿದ್ಧವಾಗಿದ್ದಳು (ಯೆರೆಮೀಯ 2:2).

*ಇಸ್ರಾಯೇಲು ಸೂಳೆಯಂತೆ.* ಆಳವಾದ ವಿಶ್ವಾಸದ ಪ್ರೀತಿಯೊಂದಿಗೆ ಪ್ರಾರಂಭವಾದ ಮದುವೆಯು ದು ಖಕರವಾದದ್ದಾಯಿತು. ಹೆಂಡತಿಯು "ಸೂಳೆ" ಯಂತಾದಳು (ಯೆರೆಮೀಯ 3:1) - ಒಮ್ಮೆ ಅಲ್ಲ ಆದರೆ ಅನೇಕ, ಅನೇಕ ಪ್ರಿಯರೊಂದಿಗೆ, "ಇಸ್ರಾಯೇಲ್ ವಂಶದವರೇ, ಒಬ್ಬ ಹೆಂಗಸು ಪತಿದ್ರೋಹ ಮಾಡಿದಂತೆ ನೀವು ನನಗೆ ದ್ರೋಹವನ್ನು ಮಾಡಿಯೇ ಇದ್ದೀರಿ ಎಂದು ಯೆಹೋವನು ಅನ್ನುತ್ತಾನೆ" (ಯೆರೆಮೀಯ 3:20). ಇಸ್ರಾಯೇಲಿನ ವಿಗ್ರಹಾರಾಧನೆಯು, ಆಕೆಯ ಕೆಟ್ಟ ನೀತಿಗಳು ಹಾಗೂ ಆಕೆಯ ಎಲ್ಲಾ ಅಪನಂಬಿಗಸ್ತಿಕೆಯು ದೇವರಿಗೆ, ಆಕೆಯ *'Ish*ಗೆ, ಆಕೆಯ ಗಂಡನಿಗೆ ವಿರುದ್ಧ ವಾಗಿ ವ್ಯಭಿಚಾರವೆಂದು ತಿಳಿಯಲ್ಪಟ್ಟಿತು, "ನಾನು ಅವರಿಗೆ ಪತಿಯಾಗಿದ್ದರೂ 'ನನ್ನ ಒಡಂಬಡಿಕೆಯನ್ನು' ಮೀರಿದರು" ಎಂದು ಕರ್ತನು ಹೇಳಿದನು (ಯೆರೆಮೀಯ 31:32). ದೇವರಿಂದ ದೂರ ಹೋಗುವದರಲ್ಲಿ ಜನರು, "ಅಧಿಕ ವ್ಯಭಿಚಾರ" ಮಾಡಿದರು (ಹೋಶೇಯ 1:2).

ಇಸ್ರಾಯೇಲು, "ನನ್ನನ್ನು ಮರೆತು ಮೂಗುತಿ ಮೊದಲಾದ ಒಡವೆಗಳಿಂದ ತನ್ನನ್ನು ಸಿಂಗರಿಸಿಕೊಂಡು ತನ್ನ ಪ್ರೇಮಿಗಳ ಹಿಂದೆ ಹೋದಳು" ಎಂದು ಕರ್ತನು ಹೇಳುತ್ತಾನೆ (ಹೋಶೇಯ 2:13). "ಕಟ್ಟಿಲ್ಲದ ಜಾರಸ್ತ್ರೀಯ ಕೃತ್ಯಗಳನ್ನು" ಆಕೆ ಮಾಡಿದಳು (ಯೆಹೆಜ್ಕೇಲ 16:30)ಣಿ "ತನ್ನ ಗಂಡನ ಬದಲಾಗಿ ಅನ್ಯರನ್ನು ಸೇರಿಸಿ ಕೊಂಡು" ವ್ಯಭಿಚಾರ ಮಾಡಿದಳು (ಯೆಹೆಜ್ಕೇಲ 16:32). "ನೀನು," ಇಸ್ರಾಯೇಲ, "ಭಿನ್ನವಾಗಿದೀ" (ಯೆಹೆಜ್ಕೇಲ 16:34) ಹಣತೆಗೆದು ಕೊಳ್ಳುವದರ ಬದಲು, "ನಿನ್ನ ಎಲ್ಲಾ ಪ್ರಿಯಕರರಿಗೆ ನೀನೇ ಬಹುಮಾನಗಳನ್ನು ಕೊಡುವುದು" (ಯೆಹೆಜ್ಕೇಲ 16:33) ಭಿನ್ನವಾಗಿದೆ. ಇಸ್ರಾಯೇಲ, "ತನ್ನ ಗಂಡನಿಗೂ ಮಕ್ಕಳಿಗೂ ಬೇಸರವಾದ" ಮಹಿಳೆಯಂತಿದೆ (ಯೆಹೆಜ್ಕೇಲ 16:45) ಮತ್ತು ವ್ಯಭಿಚಾರ ಮಾಡಿದ್ದಾಳೆ (ಯೆಹೆಜ್ಕೇಲ 16:38).

*ಇಸ್ರಾಯೇಲು ಹಿಂದಿರುಗಿ ಪಡೆಯಲ್ಪಟ್ಟದ್ದು.* ಇನ್ನೊಬ್ಬನ ಹೆಂಡತಿಯಾಗಿ ಅಪನಂಬಿಗಸ್ತಳಾದ ಮಹಿಳೆಯನ್ನು ಹಿಂದಿರುಗಿ ಗಂಡನು ತೆಗೆದು ಕೊಳ್ಳುವದನ್ನು ಧರ್ಮಶಾಸ್ತ್ರವು ಪ್ರತಿಬಂಧಿಸುತ್ತದೆ (ಧರ್ಮೋಪದೇಶಕಾಂಡ 24:1-4). ಇಸ್ರಾಯೇಲಿನ ಪತಿಯು (ಯೆರೆಮೀಯ 3:1ಣಿ KJV), "ಹಿಂದಿರುಗು" ಎಂದು ಬೇಡಿಕೊಂಡನು. "ನಾನು ನಿಮಗೆ ಪತಿ" (ಯೆರೆಮೀಯ 3:14ಎ) ಎಂದು ಹೇಳಿದನು. ದೇವರು, ಇಸ್ರಾಯೇಲಿನ ಪತಿಯು, ಇನ್ನೂ ತನ್ನ ಅಪನಂಬಿಗಸ್ತ ಹೆಂಡತಿಯನ್ನು ಪ್ರೀತಿಸಿದನು. ಆತನು ಆಕೆಯ ಹೃದಯಕ್ಕೆ ಮಾತಾಡಿದನು (ಹೋಶೇಯ 2:14) ಹಾಗೂ "ಯೌವನದಲ್ಲಿ, ಐಗುಪ್ತ ದೇಶದೊಳಗಿಂದ ಹೊರಟು ಬಂದ ದಿನದಲ್ಲಿ ಇದ್ದಂತೆ ಇರಲು" ಹೊಸ ಸೂಚನೆಯು ಮಾಡಲ್ಪಟ್ಟಿತು (ಹೋಶೇಯ 2:15). ಹೊಸ ವಿವಾಹ ನಿಶ್ಚಯವು ಹೆಚ್ಚು ಗಟ್ಟಿಯಾದ ತಳ ಹದಿಯ ಮೇಲೆ ಮಾಡಲ್ಪಟ್ಟಿತು:

> ನಾನು ನಿನ್ನನ್ನು ನನಗೆ ಸದಾಕಾಲಕ್ಕೆ ನಿಶ್ಚಿತಾರ್ಥ ಮಾಡಿಕೊಳ್ಳುವೆನುಣಿ
> ಹೌದು, ನೀತಿಯಿಂದಲೂ ನ್ಯಾಯದಿಂದಲೂ ಪ್ರೀತಿಯಿಂದಲೂ ಕನಿಕರೆ
> ಯಿಂದಲೂ ನಿನ್ನನ್ನು ನನಗೆ ನಿಶ್ಚಿತಾರ್ಥ ಮಾಡಿಕೊಳ್ಳುವೆನು.
> ನಾನು ನಂಬಿಗಸ್ತಿಕೆಯಿಂದಲೇ ನಿಶ್ಚಿತಾರ್ಥ ಮಾಡಿಕೊಳ್ಳುವೆನು,
> ಆಗ ನೀನು ಯೆಹೋವನನ್ನು ತಿಳಿದುಕೊಳ್ಳುವೆ
> (ಹೋಶೇಯ 2:19, 20).

“ಆ ದಿನದಲ್ಲಿ,” “ನೀನು ನನ್ನನ್ನು *’Ish, ...*” - ನನ್ನ ಪತಿ ಎಂದು ಕರೆಯುವಿ ಎಂದು ಕರ್ತನು ಹೇಳಿದನು (ಹೋಶೇಯ 2:16).

*ಹೃದಯಕ್ಕೆ ತಾಗುವ ದೃಷ್ಟಾಂತ.* ಹೋಶೇಯನ ಪುಸ್ತಕದ ವ್ಯಾಖ್ಯಾನವು ಬಹಳವಾಗಿ ಹೀಗಿರುವುದಾಗಿದೆ: ದೇವರು (ಹೋಶೇಯನಿಂದ ಪ್ರತಿನಿಧಿಕರಿಸಲ್ಪಟ್ಟಿದ್ದಾನೆ) ಅಲ್ಲಗಳೆಯಲ್ಪಟ್ಟ ಗಂಡನು. ಅಯೋಗ್ಯವಾದ ಹೆಂಡತಿಯನ್ನು (ಗೋಮೇರಳಿಂದ ಪ್ರತಿನಿಧಿಕರಿಸಲ್ಪಟ್ಟಿದ್ದಾಳೆ) ತನ್ನ ಹೃದಯಕ್ಕೆ ಪುನ ಸ್ವೀಕರಿಸಿಕೊಂಡನು. ಈ ವ್ಯಾಖ್ಯಾನವು ಸರಿಯಾಗಿದ್ದರೆ, ದೇವರು ಇಸ್ರಾಯೇಲನ್ನು ಮದುವೆ ಯಾದಂತೆ ಹೋಶೇಯನು ಆರಂಭದಲ್ಲಿ ಪವಿತ್ರವಾದ ಮಹಿಳೆಯನ್ನು ಮದುವೆಯಾದನು ಅನಂತರದಲ್ಲಿ ಗೋಮೇರಳು, ಇಸ್ರಾಯೇಲಿನಂತೆ, ಅಪನಂಬಿಗಸ್ತ ಹೆಂಡತಿಯಾದಳು. ಸೂಳೆಗಾರಿಕೆಯಲ್ಲಿ ಮಕ್ಕಳನ್ನು ಸಹ ಪಡೆದಳು. ಯೋಚಿಸಲಾಗದಂಥ ನಡತೆಯು ಇದ್ದರೂ ಹೋಶೇಯನು ಇನ್ನೂ ತನ್ನ ಪ್ರೀತಿಯ ಗೋಮೇರಳು ತನ್ನ ಹೆಂಡತಿಯಾಗಿ ಹಿಂದಿರುಗಬೇಕೆಂದು ಹಂಬಲಿಸಿದನು. ಹೋಶೇಯನು ಮಾಡಿದಂತೆ ಅನೇಕ ಗಂಡಂದಿರು ಅಷ್ಟು ಆಳವಾಗಿ ಪ್ರೀತಿಸುವದಿಲ್ಲ. ಕಾನೂನಿನ ಪ್ರಕಾರವಾಗಿ ಅವನು ಗೋಮೇರಳೊಂದಿಗೆ ವಿವಾಹ ವಿಚ್ಛೇದನ ಮಾಡಿಕೊಳ್ಳ ಬಹುದಿತ್ತು. ಇಲ್ಲವೇ ಆಕೆಗೆ ಕಲ್ಲೆಸೆಯಬೇಕಿತ್ತು (ನೋಡಿರಿ ಧರ್ಮೋಪದೇಶಕಾಂಡ 22:22ಣಿ 24:1). ಅದರ ಬದಲು, ಆಕೆಗೆ ಪ್ರೀತಿಯ ಮಾತುಗಳನ್ನು ಹೇಳಿದನು.

ಗೋಮೇರಳು ಹೋಶೇಯನ ಮಾತಿಗೆ ಉತ್ತರ ಕೊಟ್ಟಳು. ಆತನ ಬಳಿಗೆ ಹಿಂದಿರುಗಿದಳು. ಆದರೆ ಆಕೆ ಎರಡನೆಯಸಲ, ಬೇರೆ ಪ್ರಿಯಕರನನ್ನು ಹುಡುಕುತ್ತ ಅಲೆದಾಡಿದಳು. ಹೋಶೇಯ 3:2ರಲ್ಲಿ ಪ್ರಿಯಕರರನ್ನು ಆಕರ್ಷಿಸುವ ಗೋಮೇರಳ ಸಾಮರ್ಥ್ಯವು ಕುಂದಿ ಹೋಗಿತ್ತು ಎಂಬ ಅನ್ವಯವನ್ನು ಕಂಡು ಕೊಳ್ಳುತ್ತೇವೆಣಿ ತನ್ನ ನಿರಾಶೆಯಲ್ಲಿ ಆಕೆ ಊಟ, ವಸತಿ ಹೊಂದಿಕೊಳ್ಳುವದಕ್ಕಾಗಿ ತನ್ನನ್ನು ಗುಲಾಮಳನ್ನಾಗಿ ಮಾರಿಕೊಂಡಳು. ಹೋಶೇಯನು ವಿಶ್ವಾಸಭ್ರಷ್ಠ ಗೋಮೇರಳ ಮೇಲೆ ಇನ್ನೂ ಆಸಕ್ತಿಯುಳ್ಳವನಾಗಿದ್ದು ಆಕೆಯನ್ನು ಗುಲಾಮಗಿರಿಯಿಂದ ಪುನ ಕೊಂಡುಕೊಳ್ಳಲು ಬಯಸಿದನು. ಅವನಲ್ಲಿ ಅರ್ಧವಷ್ಟು ಸಾಕಾಗುವಷ್ಟು ಹಣ, ಹದಿನೈದು ಬೆಳ್ಳಿ ಶೆಕೆಲುಗಳು ಇದ್ದವು (ನೋಡಿರಿ ವಿಮೋಚನಕಾಂಡ 21:32)ಣಿ ಆದರೆ ಅವನ ಬೆಳ್ಳಿಗೆಕೂಡಿಸಿ ಒಂದೂವರೆ ಹೋಮೆರೆ ಬಾರ್ಲಿಯಿದ್ದು, ಇದು ಗೋಮೇರಳ ಬಿಡುಗಡೆಯನ್ನು ಕೊಳ್ಳಲು ಸಾಕಾಗುವಷ್ಟಾಗುತಿತ್ತು. ದ್ರೋಹಿಯಾದ ಗೋಮೇರಳನ್ನು ಪ್ರೀತಿಸಿದ ಆಳವಾದ ಮತ್ತು ಸತತವಾದ ಪ್ರೀತಿಯು ಅಪನಂಬಿಗಸ್ತ ಇಸ್ರಾಯೇಲಿನ ಕಡೆಗಿರುವ ದೇವರ ಆಳವಾದ, ನಿರಂತರವಾದ ಪ್ರೀತಿಯನ್ನು ಸೂಚಿಸುತ್ತದೆ.

**ಸಭೆ**

ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ ಕರ್ತನೊಂದಿಗೆ ಮದುವೆ ಮಾಡಿಕೊಂಡಂತೆ ಚಿತ್ರಿಸಲ್ಪಟ್ಟಿದ್ದಂತೆ, ಹೊಸ ಒಡಂಬಡಿಕೆಯಲ್ಲಿ ಸಭೆಯು ಚಿತ್ರೀಕರಿಸಲ್ಪಟ್ಟಿದೆ. ಕಳಂಕ ಸುಕ್ಕು ಯಾವುದೊಂದೂ ಇಲ್ಲದ ಮಹಿಮೆಯುಳ್ಳ ಸಭೆಯನ್ನು ತನ್ನ ಮದುಮಗಳನ್ನಾಗಿ ಕೊಂಡುಕೊಳ್ಳಲು ಎಲ್ಲವನ್ನೂ ತ್ಯಜಿಸಿ ಬಿಡಲು ಸಾಕಷ್ಟು ಆಳವಾದ ಪ್ರೀತಿ ಮತ್ತು ಬಲದೊಂದಿಗೆ ಇರುವಂತೆ ಕ್ರಿಸ್ತನು ಪ್ರತಿನಿಧಿಕರಿಸಲ್ಪಟ್ಟಿದ್ದಾನೆ.

ಪತಿಯಂತೆ ಕ್ರಿಸ್ತನ ಎರಡು ಸಂಗತಿಗಳು ಹೊಸ ಒಡಂಬಡಿಕೆಯಲ್ಲಿ ಕಂಡು ಬರುತ್ತವೆ. ಒಂದರಲ್ಲಿ ಪಾಪಿಯು ಆತನಲ್ಲಿ ಬಾಪ್ತಿಸ್ಮ ಹೊಂದಿದಾಗ ನಿಶ್ಚಯವನ್ನು ಸ್ವೀಕರಿಸಲ್ಪಟ್ಟ ಪ್ರಿಯಕರನಂತೆ ಆತನು ಇದ್ದಾನೆ (ಪ್ರಕಟನೆ 19:7-9). ಬಾಪ್ತಿಸ್ಮವು - ಈ ದೃಷ್ಟಾಂತರ ಪ್ರಕಾರವಾಗಿ ವಿವಾಹವಾಗಲು ಯೇಸುವಿನ ನಿಶ್ಚಯವನ್ನು ಸ್ವೀಕರಿಸುವಂತೆ

ಹಾಗೂ ವಿವಾಹವಾಗಲು ನಿಶ್ಚತಾರ್ಥ ಸಂಕೇತದಂತೆ ಇರುತ್ತದೆ. ಕ್ರೈಸ್ತನ ಇಡೀ ಜೀವಿತವು ಮದುಮಗಳ ಉಡುಗೆಯನ್ನು ಸಿದ್ಧಗೊಳಿಸುವಂಥದ್ದು (ನೀತಿಯ ವಸ್ತ್ರ ಧರಿಸುವದರಲ್ಲಿ) ಆಗಿದೆ ಹಾಗೂ ಕುರಿಮರಿಯಾದಾತನ ವಿವಾಹವು ಬರುವಾಗ ಮತ್ತು ಆತನ ಪ್ರೇಯಸಿಯಾಗಿ ತನ್ನನ್ನು ಸಿದ್ಧ ಮಾಡಿಕೊಳ್ಳುವ ವಿವಾಹದ ದಿನಕ್ಕಾಗಿ ಸಿದ್ಧತೆ ಮಾಡಿಕೊಳ್ಳುವದರಲ್ಲಿ ಇರುತ್ತದೆ. ಆಮೇಲೆ ವಿವಾಹದ ನಂತರ ಅವರು ಪರಲೋಕದಲ್ಲಿ ಎಂದೆಂದಿಗೂ ಸಂತೋಷದಿಂದ ಜೀವಿಸುವರು.

ಕ್ರಿಸ್ತನು ಪತಿಯಂತೆ ಇರುವ ಇನ್ನೊಂದು ದೃಷ್ಟಾಂತದಲ್ಲಿ ಪಾಪಿಯು ಬಾಪ್ತಿಸ್ಮದ ಸಮಯದಲ್ಲಿ ಯೇಸುವಿನೊಂದಿಗೆ ವಿವಾಹವಾದಂತೆ ಇದೆ (ಎಫೆಸ 5:22-32ಣಿ ರೋಮಾಪುರ 7:4), ಆಗ ಕ್ರೈಸ್ತನಿಗಾಗಿ ಕರ್ತವ್ಯವು ಯೋಗ್ಯವಾದ ಪತ್ನಿಯಂತೆ ಕಳಂಕ, ಸುಕ್ಕು ಇಲ್ಲದ ರೀತಿಯಲ್ಲಿ ಜೀವಿಸುವುದು.

*'Ish,* "ಪತಿ," ಯಂತೆ ದೈವತ್ವದ ದೃಷ್ಟಾಂತವು ಬೈಬಲಿನಲ್ಲಿ ಬಹಳವಾಗಿ ಮೆಚ್ಚಿಕೆಯುಳ್ಳದ್ದಾಗಿದೆ. ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲೂ ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಟ್ಟಿದೆ.

## "ರಕ್ಷಕನು"

ದೇವರು ತಮ್ಮ *Moshia',* ತಮ್ಮ ರಕ್ಷಕನು ಆಗಿರುವನೆಂದು ಯೆಶಾಯನ ಸುರುಳಿಯಲ್ಲಿ ಓದಿದಾಗ ಬಬಿಲೋನಿನಲ್ಲಿ ಸೆರೆಯಲ್ಲಿದ್ದು ದು ಖಿತರೂ ಜಜ್ಜಲ್ಪಟ್ಟವರೂ ಆದ ಯೆಹೂದ್ಯರಿಗೆ ಅದು ಎಷ್ಟು ಎದೆ ಜಿಲ್ಲನ್ನಿಸುವಂಥದ್ದು ಆಗಿರಬಹುದು. ದೇವರು ಅವರನ್ನು ಸೆರೆಯಿಂದ ರಕ್ಷಿಸುವನೆಂದೂ ಅವರ ಸ್ವಂತ ನಾಡಿಗೆ ಅವರನ್ನು ಹಿಂದಿರುಗಿ ತರುವನೆಂದೂ ವಾಗ್ದಾನ ಮಾಡಿದ್ದನು ಯೆಶಾಯ 43:3-7 ಹೀಗೆ ಹೇಳುತ್ತದೆ:

> ಯೆಹೋವನೆಂಬ ನಾನು ನಿನ್ನ ದೇವರಾಗಿದ್ದೇನೆ,
> ಇಸ್ರಾಯೇಲಿನ ಪರಿಶುದ್ಧನೂ, ನಿನ್ನ ರಕ್ಷಕನೂಣಿ
> . . . . . . . . . . . . . . . . . . . . . . . . . .
> ದೂರದಲ್ಲಿರುವ ನನ್ನ ಕುಮಾರರನ್ನೂ
> ದಿಗಂತಗಳಲ್ಲಿರುವ ನನ್ನ ಕುಮಾರಿಯನ್ನೂ
> ನನ್ನ ಮಹಿಮೆಗಾಗಿ ನಾನು ಸೃಷ್ಟಿಸಿ ರೂಪಿಸಿ ಉಂಟುಮಾಡಿದ
> ನನ್ನ ಹೆಸರಿನವರೆಲ್ಲರನ್ನೂ ಬರಮಾಡುವೆನು.

ತಂದೆಯಾದ ದೇವರು, ಪರಲೋಕದ ಎಲ್ಲಾ ಯೋಜನೆಗಳಲ್ಲಿ ಯೇಸುವಿನೊಂದಿಗೆ ಇದ್ದಾತನು, ಯೇಸುವಿನ ಮುಖಾಂತರ ಬಬಿಲೋನಿನಲ್ಲಿದ್ದ ಯೆಹೂದ್ಯರೊಡನೆ *Moshia'* ನಂತೆ ಕಾರ್ಯಸಿದ್ಧಿ ಮಾಡಿದನು. ಆತನು ಯೇಸು ಎಂದು ಕರೆಯುವದಕ್ಕಿಂತ ಎಷ್ಟೋ ಮೊದಲು, ಆತನು "ಯಾಕೋಬಿನ ಗೋತ್ರಗಳನ್ನು ಉನ್ನತಪಡಿಸುವನು" ಮತ್ತು "ಇಸ್ರಾಯೇಲಿನಲ್ಲಿ ರಕ್ಷಿತರಾದವರನ್ನು ತಿರುಗಿ ಬರಮಾಡುವನು" ಎಂದು ಮುಂತಿಳಿಸಲ್ಪಟ್ಟಿತು (ಯೆಶಾಯ 49:6). ಯೆಹೂದ್ಯರು ತಮ್ಮ ಸ್ವದೇಶಕ್ಕೆ ಹಿಂದಿರುಗಿ ಹೋಗಲು "ಅಪ್ಪಣೆಕೊಟ್ಟು, ತನ್ನ ರಾಜ್ಯದಲ್ಲೆಲ್ಲಾ ಪ್ರಕಟನೆಯನ್ನು ಕಳುಹಿಸುವಂತೆ - ಪಾರಸಿಯ ರಾಜನಾದ ಕೋರೇಷನನ್ನು ಪ್ರೇರೇಪಿಸಿದಾಗ" ಇದನ್ನು ಯೇಸು ನೆರವೇರಿಸಿದನು (ಎಜ್ರ 1:1).

*Moshia'* ನಂತೆ ಯೇಸುವಿನ ಮುಖಾಂತರ ದೇವರು ಪರದೇಶದ ದಾಸತ್ವದಿಂದ

ಯೆಹೂದ್ಯರನ್ನು ರಕ್ಷಿಸಿದನು ಅಷ್ಟೇ ಅಲ್ಲ, ಆತ್ಮೀಕ ರೀತಿಯಲ್ಲಿ ಹೆಚ್ಚಾಗಿರುವಂಥದ್ದನ್ನೂ ಸಹ ಮುಂತಿಳಿಸಲ್ಪಟ್ಟಿತು: ಆತುನು ಅನ್ಯರನ್ನು ಪಾಪದ ಕತ್ತಲೆಯಿಂದ ರಕ್ಷಿಸುವನು. "ನನ್ನ ರಕ್ಷಣೆಯು ಲೋಕದ ಕಟ್ಟ ಕಡೆಯ ವರೆಗೆ ವ್ಯಾಪಿಸುವಂತೆ ನಿನ್ನನ್ನು ಅನ್ಯಜನಾಂಗಗಳಿಗೂ ಬೆಳಕನ್ನಾಗಿ ದಯಪಾಲಿಸುವನು" (ಯೆಶಾಯ 49:6) ಎಂದು ದೇವರು ಯೇಸುವಿಗೆ ಹೇಳಿದನು. ಈ ಮಹಿಮೆಯುಳ್ಳ ಯೋಜನೆಯನ್ನು ನೆರವೇರಿಸುವದಕ್ಕೆ ದೇವರು (ಯೇಸು) ತನ್ನನ್ನು ದೇಹದಲ್ಲಿ ಧರಿಸಿಕೊಂಡು ಮರಿಯಳಿಂದ ಜನಿಸಿದನು. ಆತನು ಮುಂತಿಳಿಸಲ್ಪಟ್ಟ ನಿಯೋಗವಂತೆ, ಆತನಿಗೆ ಯೇಸು, ರಕ್ಷಕ ಎಂಬ ಹೆಸರನ್ನಿಟ್ಟರು. ಯಾಕಂದರೆ ಆತನು ಜನರನ್ನು ಅವರ ಪಾಪಗಳಿಂದ ಬಿಡಿಸುವನು.

ದೇಹದಲ್ಲಿ ದೈವತ್ವವು, ಕ್ರಿಸ್ತನಲ್ಲಿ ದೇವತ್ವ, ತಾನು ಬಬಿಲೋನಿನಲ್ಲಿ ಹಿಂದೆ ಪೂರ್ತಿಗೊಳಿಸಿದಕ್ಕಿಂತ ಹೆಚ್ಚು ಮಹತ್ವದ ನಿಯೋಗಕ್ಕಾಗಿ ಬೇತ್ಲೆಹೇಮಿಗೆ ಬಂದನು. ದೇವರು *Moshia'* ನಂತೆ - ಹೌದು, ಯೇಸುವಿನಂತೆ - ಪಾಪಭರಿತ ಅಪರಾಧ ಬಂಧನದಿಂದ ಆತ್ಮಗಳನ್ನು ರಕ್ಷಿಸುವದಕ್ಕಾಗಿ ಬಂದನು. ದೈವಿಕ ಯೋಜನೆ ಮತ್ತು ಪ್ರವಾದನೆಗೆ ಅನುಗುಣವಾಗಿ ರಕ್ಷಕನಂತೆ ದೇವರ ಕಾರ್ಯವು ಯೆಹೂದ್ಯರನ್ನು ದಾಟಿ ತಲುಪುವುದು. ನಿರ್ಬಂಧಿತ ಕಾರ್ಯವು "ಆತನಿಗೆ ಬಹಳ ಚಿಕ್ಕದಾಗಿರುವುದು" (ಯೆಶಾಯ 49:6), ಮತ್ತು ದೇವರ ಪ್ರೀತಿಯ ಉದ್ದ, ಅಗಲ, ಆಳ ಹಾಗೂ ಎತ್ತರಕ್ಕಿಂತ ಕಡಿಮೆ ಗ್ರಹ್ಯವಾಗಿರುವುದು. ಕೊರ್ನೇಲ್ಯನ ಮನೆಯವರೊಂದಿಗೆ ಪ್ರಾರಂಭಿಸಿ ಜನಾಂಗಗಳು ಆತನ "ನೀತಿಯನ್ನು ಮತ್ತು ಎಲ್ಲಾ ಅರಸರು (ಆತನ) ಮಹಿಮೆಯನ್ನು ನೋಡುವರು" (ಯೆಶಾಯ 62:2), ರಕ್ಷಣೆಯ ಆನಂದದಲ್ಲಿ ಸಂತೋಷಪಡುವರು.

ಪರಿಣಾಮಗಳು, *Moshia'*, ಯೇಸುವೆಂಬ - ರಕ್ಷಕನ ಮತ್ತು ದೈವತ್ವದ - ಹೆಸರಿನಲ್ಲಿ ಶಿಖರವನ್ನು, ಪರಮಾವಧಿಯನ್ನು ತಲುಪಿರುವುದಾಗಿದೆ - ಯೇಸುವಿನ ಹೆಸರಿನಲ್ಲಿ ಎಲ್ಲರೂ ಅಡ್ಡ ಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಅರಿಕೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ನೋಡಿರಿ ಫಿಲಿಪ್ಪಿ 2:10, 11).

## ಮುಕ್ತಾಯ

ದೇವರು ತನ್ನ ಜನಾಂಗದ ಪರವಾಗಿ ಕಾರ್ಯ ಮಾಡುತ್ತಾನೆ. ಆತನು ಅವರ ನ್ಯಾಯಾಧಿಪತಿಯೂ, ಅವರ ಕುರುಬನು, ಹಾಗೂ ಅವರ ಅರಸನು. ವಿಮೋಚಕನಂತೆ ಹಾಗೂ ತಂದೆಯಂತೆ ಆತನ ಪಾತ್ರಗಳಲ್ಲಿ ಆತನ ಜೋಪಾಸನೆ, ನಡಿಸುವಿಕೆಯು ಸ್ಪಷ್ಟವಾಗಿರುವುದು. ಆತನಿಗೆ ವಿಧೇಯರಾಗುವವರೊಂದಿಗೆ ಆತನ ಸಂಬಂಧವು ಪುರುಷನಿಗೆ ತನ್ನ ಹೆಂಡತಿಯೊಂದಿಗೆ ಇರುವ ಸಂಬಂಧದಂತೆ ವೈಯಕ್ತಿಕವಾಗಿರುವುದು। ಹೀಗೆ ದೇವರು ತನ್ನನ್ನು ಹಿಂಬಾಲಿಸುವವರ ಪತಿಯಂತೆ ವಿವರಿಸಲ್ಪಟ್ಟಿರುವುದು. ಇದಲ್ಲದೆ ಆತನು ಅವರ ರಕ್ಷಕನು ಅವರನ್ನು ಅವರ ತೊಂದರೆಗಳಿಂದ ಬಿಡುಗಡೆ ಮಾಡುವನು.

ದೇವರೊಂದಿಗಿನ ನಮ್ಮ ಅನುದಿನದ ನಡೆಯಲ್ಲಿ, ಆತನು ನಮ್ಮನ್ನು ನಡಿಸುವಾತನು, ನಮಗಾಗಿ ಚಿಂತಿಸುವಾತನು ಮತ್ತು ನಮ್ಮನ್ನು ಸತತವಾಗಿ ಕಾಯುವಾತನು ಎಂಬಂತೆ ನೋಡಬೇಕು. ಒಬ್ಬನೇ ನಿಜವಾದ ದೇವರು ನಮ್ಮ ಪ್ರತಿಯೊಂದು ಅಗತ್ಯತೆಯನ್ನು ಪೂರೈಸುವನು.

ಟಿಪ್ಪಣಿಗಳು

[1]ಹೊಸ ಒಡಂಬಡಿಕೆಯ ತಂದೆ/ದೇವರು. ಹಳೇ ಒಡಂಬಡಿಕೆಯ ಕರ್ತನು/ದೇವರು ಎಂಬುದರ ಮೇಲೆ ಬಹಳ ಸುಧಾರಣೆಯಿದೆ ಎಂದು ದೂರುವುದು ಹಳೇ ಒಡಂಬಡಿಕೆಯ ಅನೇಕ ಪರಿಶುದ್ಧ ಬರಹಗಳನ್ನು ಕಡೆಗಣಿಸುತ್ತದೆ. ಅವುಗಳಲ್ಲಿ ಕೀರ್ತನೆ 68:5ಣಿ 89:26ಣಿ 103:13,14ಣಿಜ್ಞಾನೋಕ್ತಿ3:12ಣಿಯೆಶಾಯ43:6ಣಿ63:16ಣಿ64:8ಣಿಯೆರೆಮೀಯ31:9ಣಿಮತ್ತು ಹೋಶೇಯ 1:10 ಒಳಗೊಂಡಿವೆ. [2]ನಮಗೆ ಒದಗಿಸುವ ದೇವರ ಇಷ್ಟದ ಅಧ್ಯಯನಕ್ಕೆ "ಯೆಹೋವ" ಎಂಬ ಪಾಠವನ್ನು ನೋಡಿ.

# "ಸೇವಕ"

ದೇವರು ಮೊದಲು *'ebed*, "ಸೇವಕ" ಎಂಬ ಅಂಕಿತ ನಾಮವನ್ನು ಇಸ್ರಾಯೇಲಿಗೆ ಅನ್ವಯಿಸಿದನು. ಈ ದೇಶದ ಜನಾಂಗವು ದೇವರ ಜನಾಂಗವು, ಅಬ್ರಹಾಮನ ನಂಬಿಕೆಯುಳ್ಳವರು, ಲೋಕದೊಳಗೆ ಕ್ರಿಸ್ತನನ್ನು ತರಲು ಆಯ್ಕೆಯಾದವರು ಆಗಿದ್ದರು. ದೇವರ ದೃಷ್ಟಿಯಲ್ಲಿ ಇಸ್ರಾಯೇಲು, ಆತನ *'ebed* ಪ್ರೀತಿಯುಳ್ಳವನು ಅಮೂಲ್ಯವಾದವನು ಆಗಿದ್ದನು (ಯೆಶಾಯ 43:4)ಣಿ ಈ ಸೇವಕನು ಕಿವುಡನೂ ಕುರುಡನೂ ಆಗಿರುವದರಿಂದ (ಯೆಶಾಯ 42:19) ದೇವರನ್ನು ನಿರಾಶೆಪಡಿಸಿದನು. ಜನರು ತಮ್ಮ ಬಲವನ್ನು ವ್ಯರ್ಥತ್ವದ ಮೇಲೆ (ಯೆಶಾಯ 49:4) ಮತ್ತು ಪಾಪ ಮಾಡುವದರಲ್ಲಿ (ಯೆಶಾಯ 44:21, 22) ವ್ಯಯಿಸಿದರು. ಕ್ರಿಮಿ ಎಂದು ವಿವರಿಸುವ ಮಟ್ಟಕ್ಕೆ ಬಂದರು (ಯೆಶಾಯ 41:14).

ಹೀಗೆ ದೇವರು ತನಗೆ ಇಷ್ಟವಾದ ಒಬ್ಬ ಹೊಸ *'Ebed* ನನ್ನು (ಯೆಶಾಯ 42:1) ಆಯ್ಕೆಮಾಡಿಕೊಂಡನು, ಸೇವಕನಾಗಿ ಆತನ ಕಾರ್ಯವು ಇತರರನ್ನು, ಇಸ್ರಾಯೇಲ್ಯರನ್ನು ವಿಮೋಚಿಸುವುದು ಮತ್ತು ಅವರ ಪಾಪವನ್ನು ಹೊತ್ತುಕೊಳ್ಳುವುದು. ಈ *'ebed*ನು ಇಸ್ರಾಯೇಲಿಗೆ ಸಹಾಯ ಮಾಡುವದಕ್ಕೆ ಮಿತಿಯುಳ್ಳವನಾಗಿರುವದಿಲ್ಲಣಿ ಆತನು ಅನ್ಯರಿಗೆ ನೀತಿಯನ್ನು ತರುವಾತನೂ (ಯೆಶಾಯ 49:1) ಮತ್ತು ಲೋಕದ ಕಟ್ಟಕಡೆಯವರೆಗೆ ರಕ್ಷಣೆಯನ್ನು ತರುವಾತನೂ ಆಗಿರುವನು (ಯೆಶಾಯ 49:6). ಈ ಪರಿಪೂರ್ಣ *'Ebed*ನು ಬುದ್ಧಿ ವಂತಿಕೆಯಿಂದ ವ್ಯವಹರಿಸುವಾತನೂ, ಎಂದೂ ಸೋತು ಹೋಗದಿರುವಾತನೂ ಇಲ್ಲವೇ ನಿರಾಶನಾಗದಾತನೂ ಆಗಿರುವನು (ಯೆಶಾಯ 42:4ಣಿ 52:13). ಆತನು ಪ್ರತಿನಿಧಿಯಾಗಿ ಬಂದ ಪಾಪ ಹೊರುವವನಾಗಿರುವನು (ಯೆಶಾಯ 53:5, 6).

ಈ ಆದರ್ಶ *'Ebed*ನು ಪರಲೋಕದಲ್ಲಿ ವಾಸಿಸುವಾತನು ಮತ್ತು ದೇವರ ಸ್ವಭಾವವನ್ನು ಹೊಂದಿದವನಾಗಿದ್ದನುಣಿ ಆತನು ದೇವರಾಗಿದ್ದನು (ಯೋಹಾನ 1:1). ಹೀಗಿದ್ದರೂ ದೇವರ *'Ebed* ಆಗುವಲ್ಲಿ ಆತನು ತನ್ನ ಪರಲೋಕದ ಸ್ಥಾನಕ್ಕೆ ಅಂಟಿಕೊಳ್ಳಲಿಲ್ಲ. ಆದರೆ ದಾಸನ ರೂಪವನ್ನು ಧರಿಸಿಕೊಳ್ಳಲು ತನ್ನನ್ನು ತಗ್ಗಿಸಿಕೊಂಡನು (ಫಿಲಿಪ್ಪಿ 2:6, 7). ಭೂಲೋಕದಲ್ಲಿ ಅತೀ ದೀನನಾದ ಸೇವಕನಾಗಿದ್ದನುಣಿ ಸೇವೆ ಮಾಡಿಸಿಕೊಳ್ಳುವದಕ್ಕೆ ಅಲ್ಲ ಸೇವೆಮಾಡುವದಕ್ಕೆ ಬಂದನು (ಮತ್ತಾಯ 20:25-28). ರೂಪದಲ್ಲಿ ಮಾತ್ರವೇ ಅಲ್ಲ, ಹೃದಯದಲ್ಲಿಯೂ ಆತನು ನಮ್ಮ *'Ebed* ಆದನು. ಹೊಲಸು ಪಾದಗಳನ್ನು ತೊಳೆಯುವಲ್ಲಿ ಆತನು ಅವಮಾನಪಡಲಿಲ್ಲ, ನಾಚಿಕೆಪಟ್ಟುಕೊಳ್ಳಲಿಲ್ಲ - ಆದರೆ ಆ ಕೀಳು ಸೇವೆಯು ಪಾಪ ಹೊತ್ತು ಕೊಳ್ಳುವಂಥ

ಆತನ ಸೇವೆಗೆ ಹೋಲಿಸಿದರೆ ಅದು ಹಗುರವಾದ ಸಂಗತಿಯಾಗಿತ್ತು. ಆತನ ದೇಹವು ಭಯದಿಂದ ಹಿಂಜರಿಯಿತು, ಶಿಲುಬೆಯಿಂದ ಕಳೆಗುಂದಿತು. ಆದರೆ ಆತನ ಆತ್ಮವು ಆತನ ದೇಹಕ್ಕಿಂತ ಹೆಚ್ಚು ಬಲವಾಗಿತ್ತು. ತನ್ನ ಹೃದಯದಲ್ಲಿ ಹಿಂಜರಿಯದೇ, ನಿಜವಾದ ದಾಸತ್ವದ ಸಂಕ್ಷಿಪ್ತ ನಿರೂಪಣೆಯಂತೆ, "ಆತನು ಮಗನಾಗಿದ್ದರೂ ಆತನು ವಿಧೇಯತೆಯನ್ನು ಕಲಿತು ಕೊಂಡನು" (ಇಬ್ರಿಯ 5:8, 9).

ಶಿಲುಬೆಯ ಮೇಲೆ ಯೇಸುವಿನ ಶ್ರಮೆಯನ್ನೂ ದು ಖಕರವಾದ ಮರಣವನ್ನೂ ಆತನ ತಂದೆಯು ನೋಡಿದನು. ಲೋಕದ ಪಾಪಗಳ ಕ್ರಯವನ್ನು ಕೊಡಲಿಕ್ಕೆ ಅಂಥ ಶ್ರಮೆಯು ಸಾಕಷ್ಟಾಗಿದೆ ಎಂದು ದೇವರು ಹೇಳಿದನು. ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಸೇವಕರಲ್ಲಿ ಅತೀ ದೀನನಾದವನನ್ನು ಉನ್ನತಕ್ಕೆ, ಪರಲೋಕದ ಮಹಿಮೆಯ ಸಿಂಹಾಸನಕ್ಕೆ ಏರಿಸಿದನು. ಪ್ರತಿಯೊಂದು ಹೆಸರಿಗಿಂತ ಉನ್ನತವಾದ ಹೆಸರನ್ನು ಆತನಿಗೆ ಕೊಟ್ಟನು. ಯೇಸು, ನಮ್ಮ *'Ebed*ನು ದೇವರ ಸೇವಕನಂತೆ ಮತ್ತು ಎಲ್ಲಾ ಜನರ ಸೇವಕನಂತೆ ಭೂಲೋಕಕ್ಕೆ ಬಂದನು. ಆದರೆ ಅಂತಿಮವಾಗಿ ವಿಶ್ವದಲ್ಲಿ ಆತನಿಗೆ ಮುಖ್ಯವಾದ ಸ್ಥಾನವು ಕೊಡಲ್ಪಟ್ಟಿತು. ಸೇವೆ ಮಾಡುತ್ತ ಆತನು ದೊಡ್ಡವನಾದನು.

---

## *'EL RO'I:* "ನೋಡುವ ದೇವರು"

ಐಗುಪ್ತದ ದಾಸಿಯಾದ ಹಾಗರಳು ತನ್ನ ಯಜಮಾನಿ ಸಾರಾಯಳಿಂದ ತಪ್ಪಿಸಿಕೊಂಡು ಓಡಿಹೋಗುತ್ತಿದ್ದಾಗ, ದೇವರು ತನಗಾಗಿ ಗಮನ ಕೊಟ್ಟನೆಂದು ತಿಳಿದು ಬಹಳ ಆನಂದ ಪಟ್ಟಳು. ತಾನು ಒಬ್ಬಳೇ ಆಗಿರುವೆನೆಂದು ಯೋಚಿಸಿದಾಗ ಆತನು ಆಕೆಯ ದು ಖಪಡುವ ಸ್ಥಿತಿಯನ್ನು ನೋಡಿದನು (ಆದಿಕಾಂಡ 16).

ದೇವರು (ಇಲ್ಲವೇ ತಾನು ದೇವರಾಗಿದ್ದೇನೆಂಬಂತೆ ಮಾತಾಡುವಷ್ಟು ವಿಶೇಷವಾದ ದೇವರ ಒಬ್ಬ ಪ್ರತಿನಿಧಿಯು) ಮಾತಾಡಿದಾಗ, ಆಕೆಯ ಆಶ್ಚರ್ಯವೂ ಆನಂದವೂ ಆತನನ್ನು, *'El Ro'i* "ನೋಡುವ ದೇವರು" (ಆದಿಕಾಂಡ 16:13) ಎಂದು ಕರೆಯುವದಕ್ಕೆ ಕಾರಣವಾಯಿತು. "ಬಲಶಾಲಿಯಾದಾತನು" ಎಂಬಂತೆ ದೇವರನ್ನು ವಿವರಿಸುವ ಪದವನ್ನು ಉಪಯೋಗಿಸಿದ್ದರಲ್ಲಿ ದೈವತ್ವದ ಬಗ್ಗೆ ಆಕೆ ಮೂರು ಸಂಗತಿಗಳನ್ನು ಒಪ್ಪಿಕೊಳ್ಳುತ್ತಾಳೆ. ಆತನು ಬಲಶಾಲಿ, ಆತನು ನೋಡುವಾತನು ಹಾಗೂ ಒಬ್ಬಂಟಿಗರಾಗಿರುವವರನ್ನೂ ಕ್ಷೋಭೆಗೊಂಡ ವ್ಯಕ್ತಿಗಳನ್ನೂ ಸಹ ಆತನು ಗಮನಿಸುವನು.

## *HAI RO'I:* "ನನ್ನನ್ನು ನೋಡುವ ಸಜೀವನು"

ಆದಿಕಾಂಡ 16:14ರಲ್ಲಿ ದೇವರಿಗಾಗಿ ಹಾಗರಳು ಉಪಯೋಗಿಸಿದ ಹೆಸರು: *Hai Ro'i* ಎಂಬುದನ್ನು "ನನ್ನನ್ನು ನೋಡುವ ಸಜೀವನು" ಎಂದು ಸ್ವಲ್ಪ ಬದಲಾವಣೆಯನ್ನು ನೋಡುತ್ತೇವೆ. ದೇವರ ದೂತನು ಆಕೆಯೊಂದಿಗೆ ಮಾತಾಡಿದಾಗ ಹಾಗರಳು ಮರಳು ಕಾಡಿನಲ್ಲಿ ಶೂರಿನ ಮಾರ್ಗದ ಒರತೆಯ ಹತ್ತಿರ ತಲುಪಿದ್ದಳು. ಈ ಒರತೆಗೆ "The Well of *Hai Ro'i*" ಎಂದು ಹೆಸರಿಡಲ್ಪಟ್ಟಿತ್ತೆಂದು ಕಂಡುಬರುತ್ತದೆ. ದೈವತ್ವದ ಬಗ್ಗೆ

ಹಾಗರಳ ವಿವರಣೆಗೆ ಹೆಚ್ಚಾದ ವಿಚಾರವು ಕೂಡಿಸಲ್ಪಟ್ಟಿತು: ತನ್ನನ್ನು ನೋಡಿದಾತನು ಬಲಶಾಲಿಯಾದಾತನು ಎಂಬುದನ್ನು ಆಕೆ ಒತ್ತಿ ಹೇಳಿದ್ದಳು. ಹಾಗೂ ಬಾವಿಗೆ ಹೆಸರಿಡುವಲ್ಲಿ ಯಾರೂ ಒಬ್ಬರು ಆತನು ಜೀವಿಸುವಾತನು ಎಂಬುದನ್ನು ಕೂಡಿಸಿದರು.